# ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ



ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Time for Every Pupose)

# ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

# ಪರಿವಿಡಿ


1. ದೇವರು ನೋಡುವಂತಹ ಪ್ರಕಾರದ ಸಮಯ 1

2. ಸಮಯವನ್ನು ಗುರುತಿಸುವುದು ಮತ್ತು ಪುನಃ ಪಡೆದುಕೊಳ್ಳುವುದು 7

3. ಸಮಯಗಳು ಮತ್ತು ಋತುಗಳನ್ನು ಅರ್ಥಮಾಡಿಕೊಳ್ಳುವುದು 16

4. ನಮ್ಮ ಜೀವನವನ್ನು ವಿವೇಚನೆಯಿಂದ ಆಜ್ಞಾಪಿಸಿಕೊಳ್ಳಬೇಕು 27

5. ಸಮಯದ ಪುನಃ ಸ್ಥಾಪನೆ 34

# 1

# ದೇವರು ನೋಡುವಂತಹ ಪ್ರಕಾರದ ಸಮಯ

ಪ್ರಸಂಗಿ 3:1–8

**ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು ಹುಟ್ಟುವ ಸಮಯ, ಸಾಯುವ ಸಮಯ, ನೆಡುವ ಸಮಯ, ನೆಟ್ಟದ್ದನ್ನು ಕಿತ್ತು ಹಾಕುವ ಸಮಯ, ಕೊಲ್ಲುವ ಸಮಯ, ಸ್ವಸ್ಥ ಮಾಡುವ ಸಮಯ, ಕೆಡವಿಬಿಡುವ ಸಮಯ, ಕಟ್ಟುವ ಸಮಯ, ಅಳುವ ಸಮಯ, ನಗುವ ಸಮಯ, ಗೋಳಾಡುವ ಸಮಯ, ಕುಣಿದಾಡುವ ಸಮಯ, ಕಲ್ಲುಗಳನ್ನು ಚೆಲ್ಲುವ ಸಮಯ, ಕಲ್ಲುಗಳನ್ನು ಕೂಡಿಸುವ ಸಮಯ ಅಪ್ಪುವ ಸಮಯ, ಅಪ್ಪದಿರುವ ಸಮಯ, ಗಳಿಸುವ ಸಮಯ, ಕಳೆಯುವ ಸಮಯ, ಕಾಪಾಡುವ ಸಮಯ, ಬಿಸಾಡುವ ಸಮಯ, ಹರಿಯುವ ಸಮಯ, ಹೊಲಿಯುವ ಸಮಯ, ಸುಮ್ಮನಿರುವ ಸಮಯ, ಮಾತಾಡುವ ಸಮಯ ಪ್ರೀತಿಸುವ ಸಮಯ, ಸಮಾಧಾನದ ಸಮಯ ಅಂತೂ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು.**

ಪ್ರಸಂಗಿ 3:11

**ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ. ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ. ಆದರೂ ದೇವರು ಅದ್ಭುತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ.**

ದಾನಿಯೇಲನು 2:21

**ಕಾಲ ಸಮಯಗಳನ್ನು ಮಾರ್ಪಡಿಸುತ್ತಾನೆ ರಾಜರನ್ನು ತಳ್ಳುತ್ತಾನೆ ನಿಲ್ಲಿಸುತ್ತಾನೆ. ಜ್ಞಾನಿಗಳ ಜ್ಞಾನವು ವಿವೇಕಿಗಳ ವಿವೇಕವು ಆತನ ವರವೇ.**

''ಈಗ ಸಮಯ ಎಷ್ಟು?'' ಎಂಬುದಾಗಿ ನಾವೆಲ್ಲರೂ ಪುನರಾವರ್ತಿಸಿ ಕೇಳುವಂತಹ ಪರಿಚಿತವಾದ ಪ್ರಶ್ನೆಯಾಗಿದೆ. ಇಂದಿನ ವೇಗದ ಜಗತ್ತಿನಲ್ಲಿ ಜನರು ಗಡಿಯಾರದ ಕೆಲಸದಂತೆ ಓಡುತ್ತಿದ್ದಾರೆ. ವಾಸ್ತವವಾಗಿ ನಮ್ಮಲ್ಲಿ ಕೆಲವರು ನಮ್ಮ ಜೀವಿತಗಳನ್ನು ಗಡಿಯಾರದ ಸುತ್ತಲೂ ಕ್ರಮದಲ್ಲಿರಿಸಲು ಉತ್ಸುಕರಾಗಿರುತ್ತೇವೆ. ಗಡಿಯಾರ ಸಮಯ ನಮ್ಮ ಜೀವಿತದ ಮೇಲೆ ಒಂದು ಬಲವಾದ ಹಿಡಿತವನ್ನು ಹೊಂದಿದೆ. ಸರಿಯಾದ ಸಮಯದಲ್ಲಿ ಸರಿಯಾದದ್ದನ್ನು ಮಾಡುವದು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿರುವುದು, ಸರಿಯಾದ ಸಮಯದಲ್ಲಿ ಸರಿಯಾದದದ್ದನ್ನು ಹೇಳುವುದು – ಇಂತಹ ಎಲ್ಲವು ನಮಗೆ ತುಂಬಾ ಅರ್ಥವುಳ್ಳವುಗಳಾಗಿವೆ. ಅದೇ ಸಮಯದಲ್ಲಿ

ಸಮಯವನ್ನು ''ಉಳಿಸಲು '' ಅರ್ಥವನ್ನು ಮತ್ತು ವಿಧಾನಗಳನ್ನು ಗುರ್ತಿಸಲು ಹೆಚ್ಚಿನ ಪರಿಶ್ರಮವನ್ನು ವ್ಯಯಿಸುತ್ತೇವೆ.

ತಿಳಿಯದ ಸಮಯದಿಂದ ಪ್ರಸ್ತುತಕ್ಕೆ, - ಪ್ರಪಂಚದ ಅಸ್ತಿವಾರದಿಂದಲೂ ಅಥವಾ ಬಹುಶಃ ನಿತ್ಯತ್ವದ ಹಿಂದಿನಿಂದಲೂ ಟಿಕ್ ಟಿಕ್ ಶಬ್ದದಿಂದ ದೂರದಾ ಒಂದು ಗಡಿಯಾರವನ್ನು ದೇವರು ಹೊಂದಿದ್ದನು ಎಂಬುದನ್ನು ಪರಿಗಣಿಸಿದ್ದೀರಾ? ನಮ್ಮ ಪ್ರತಿಯೊಬ್ಬರ ಜೀವಿತಗಳಿಗಾಗಿ ದೇವರು ಒಂದು ಗಡಿಯಾರ ಹೊಂದಿದ್ದಾನೆಂಬುದು ನಿಮಗೆ ತಿಳಿದದೆಯಾ? ನಿಮ್ಮ ಕೈಯಲ್ಲಿರುವ ಗಡಿಯಾರಕನುಸಾರವಾಗಿ ಮಾತ್ರವಲ್ಲದೇ, ದೇವರ ಗಡಿಯಾರಕ್ಕನುಸಾರವಾಗಿ ನಿಮ್ಮ ಜೀವಿತಗಳು ಕ್ರಮಗೊಂಡಿರಬೇಕೆಂಬುದಾಗಿ ನೀವು ಅಪೇಕ್ಷಿಸಿದ್ದೀರಾ ಅಥವಾ ಎಂದಿಗೂ ಪ್ರಯತ್ನಿಸಿದ್ದೀರಾ? ದೇವರ ಸಮಯಕ್ಕನುಸಾರವಾಗಿ ಕಾರ್ಯಗಳನ್ನು ಮಾಡುವಂತದ್ದು ಮತ್ತು ನಿಮ್ಮ ಜೀವಿತದ ಯಾವುದೇ ನಿರ್ಧಾರಿತ ಸಮಯದಲ್ಲಿ ಆತನು ಅಪೇಕ್ಷಿಸಿದ್ದನ್ನು ನೀವು ಮಾಡುತ್ತಿರುವಂತಹ ವಿಷಯವು ನಿಮಗೆ ಎಷ್ಟು ಪ್ರಾಮುಖ್ಯಕರವಾಗಿದೆ? ಮತ್ತು ನಿಮ್ಮ ಜೀವಿತದಲ್ಲಿ ನಿಗದಿತ ಸಮಯದಲ್ಲಿ ಆತನು ಅಪೇಕ್ಷಿಸುವಂತದ್ದು ನೀವಾಗಿ ಕಂಡುಬರುವಂತದ್ದು ಎಷ್ಟು ಪ್ರಾಮುಖ್ಯಕರವಾಗಿದೆ?

ಇವುಗಳು ಸವಾಲುಳ್ಳ ಪ್ರಶ್ನೆಗಳಾಗಿವೆ. ಮತ್ತು ದೇವರ ಗಡಿಯಾರದೊಡನೆ ನಮ್ಮ ಜೀವಿತಗಳು ಆದೇಶಿಸಲ್ಪಟ್ಟಿವೆ ಎಂಬುದನ್ನು ತಿಳಿದುಕೊಳ್ಳುವುದನ್ನು ಕಲಿಯುವುದು ನಿಜಕ್ಕೂ ಮುಖ್ಯವಾಗಿದೆ. ವ್ಯಕ್ತಿಗತವಾಗಿ ನಮಗೆ ದೇವರ ಸಮಯವನ್ನು ಅರ್ಥಮಾಡಿಕೊಳ್ಳಲೂ ಮತ್ತು ಗ್ರಹಿಸಿಕೊಳ್ಳಲೂ ಈ ಪುಸ್ತಕವು ಸಹಾಯ ಮಾಡುತ್ತದೆ.

## ದೇವರ ಗಡಿಯಾರ

ಅಪೊಸ್ತಲರ ಕೃತ್ಯಗಳು 1: 6,7

**ಕೂಡಿ ಬಂದವರು ಆತನನ್ನು ಸ್ವಾಮೀ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸಿಕೊಡುವಿಯೋ? ಎಂದು ಕೇಳಲೂ ಆತನೂ ಅವರಿಗೆ - ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ (ಗ್ರೀಕ್‌ನಲ್ಲಿ ಕ್ರೋನೋಸ್) ಸಮಯಗಳನ್ನು (ಗ್ರೀಕ್‌ನಲ್ಲಿ ಕೈರೋಸ್) ತಿಳಿಕೊಳ್ಳುವದು ನಿಮ್ಮ ಕೆಲಸವಲ್ಲ**

ದೇವರು ಒಂದು ವೇಳಾಪಟ್ಟಿಯನ್ನು ಹೊಂದಿದ್ದಾರ, ಇಂದು ಒಂದು ನಿರ್ದಿಷ್ಟವಾದ ಆದೇಶ ಮತ್ತು ಸಮಯದಲ್ಲಿ ಆತನು ಯೋಜಿಸಲ್ಪಟ್ಟಂತಹ ಘಟನೆಗಳನ್ನು ಆತನು ತೆರೆಯುತ್ತಾನೆ. ಆತನು ಮಾತಾಡುತ್ತಾನೆ ಮತ್ತು ಆಮೇಲೆ ಅದರ ಸಮಯದಲ್ಲಿ

ಆತನ ಮಾತನ್ನು ನೆರವೇರಿಸುತ್ತಾನೆ. ದೇವರು ಮಾತಾನಾಡುವಂತಹ ವಾಕ್ಯಗಳು ''ಈ ನನ್ನ ಮಾತು ತಕ್ಕ ಸಮಯದಲ್ಲಿ ನೆರವೇರುವದು'' (ಲೂಕ 1:20) ದೇವರು ಮಾತಾನಾಡಿದಂತಹ ಕೆಲವು ವಿಷಯಗಳು ''ಈ ಮಾತುಗಳು ಅಂತ್ಯಕಾಲದವರೆಗೆ ಮುಚ್ಚಲ್ಪಟ್ಟು ಮುದ್ರಿತವಾಗಿವೆ'' (ದಾನಿಯೇಲನು 12:9) ಎಂಬುದಾಗಿ ದೇವರ ''ಗಡಿಯಾರದಲ್ಲಿ'' ''ಸಂಪೂರ್ಣವಾದ ಸಮಯಗಳು'' ಅಥವಾ ''ನಿಗದಿತ ಸಮಯ'' ಎಂಬುದಾಗಿ ಅಲ್ಲಿ ಕರೆಯಲ್ಪಡುತ್ತದೆ. ಇದು ಅತ್ಯಂತ ಸೂಕ್ತವಾದ, ಹೊಂದಿಕೆಯಾದ ಮತ್ತು ತಕ್ಕ ಸಮಯ – ಅದು ಮಾಗಿದ ಸಮಯ ಸರಿಯಾದ ಸಮಯವನ್ನು ಸೂಚಿಸುತ್ತದೆ. ಉದಾಹರಣೆಗೆ ಆದಿಕಾಂಡದ ಮೂರನೇ ಅಧ್ಯಾಯದಲ್ಲಿನ ಏದೇನಿನ ಒಡಂಬಡಿಕೆಯಲ್ಲಿ ಬರಲಿರುವ ವಿಮೋಚಕನ ವಾಗ್ದಾನವು ಮಾಡಲ್ಪಟ್ಟರೂ ಯೇಸುವು ಇತಿಹಾಸಕ್ಕೆ ಹೆಜ್ಜೆಯನ್ನಿಡುವ 2 ಸಾವಿರ ವರ್ಷಗಳ ವರೆಗೂ ಅದು ಜರುಗಲಿಲ್ಲ. ಅಂತಹ ಒಂದು ಉದ್ದವಾದ ಕಾಯುವಿಕೆಯ ಸಮಯ ಏಕೆ? ''ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು'' (ಗಲಾತ್ಯದವರಿಗೆ 4:3) ಎಂಬುದಾಗಿ ಸತ್ಯವೇದ ಹೇಳುತ್ತದೆ. ''ಕೈರೂಸ್'' (**Kairos**) ಕ್ಷಣದಲ್ಲಿ – ಅತ್ಯಂತ ತಕ್ಕದಾದ ಸಮಯ, ಇತಿಹಾಸದಲ್ಲಿ ಸರಿಯಾದ ಸಮಯದಲ್ಲಿ – ಕರ್ತನಾದ ಯೇಸುವು ಈ ಲೋಕಕ್ಕೆ ಬಂದನು. ದೇವರ ನಿತ್ಯತ್ವದ ಉದ್ದೇಶವು ಅಂತೆಯೇ ನೆರವೇರಲ್ಪಡುತ್ತವೆ. '' ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆ ಮಾಡಿಕೊಂಡಿದ್ದಾನೆ. ಅದೇನೆಂದರೆ ಭೂಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದಾಗಿ ಕೂಡಿಸಬೇಕೆಂಬದೇ (ಎಫೆಸದವರಿಗೆ 1:9,10) ದೇವರು ''ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ'' (ಅಪೊಸ್ತಲರ ಕೃತ್ಯಗಳು 17:31)

ಆದ್ದರಿಂದ ಸಮಯದ ಚೌಕಟ್ಟನ್ನು ಹೊಂದಿದ್ದಾನೆಂದು ನಾವು ನೋಡುತ್ತೇವೆ, ಅದರಲ್ಲಿ ಘಟನೆಗಳ ಅವಧಿಯಲ್ಲಿ ಆತನು ಮಧ್ಯಪ್ರವೇಶಿಸುತ್ತಾನೆ. ಆತನು ಪೂರ್ವ ನಿರ್ಧರಿತವಾದದ್ದನ್ನು ಆತನ ಸಾರ್ವಭೌಮತ್ವದಲ್ಲಿ ನೆರವೇರಿಸುತ್ತಾನೆ. ಆತನು ಭೂಮಿಯನ್ನು ಬಿಟ್ಟುಹೋಗುವ (ಸ್ವರ್ಗಾರೋಹಣ ಮುಂಚೆ ಶಿಷ್ಯರುಗಳು ರೋಮನ ಸಾಮ್ರಾಜ್ಯದ ಅಧೀನತೆಯಿಂದ ಸ್ವತಂತ್ರಗೊಳ್ಳುವ ಮತ್ತು ಬಲವನ್ನು ಪುನಃ ಕಟ್ಟಿಕೊಳ್ಳುವಂತಹ ಇಸ್ರಾಯೇಲರ ಸಮಯದ ಕುರಿತು ವಿಚಾರಿಸಿದರು. (ಅಪೊಸ್ತಲರ

ಕೃತ್ಯಗಳು 1:6,7) ತಂದೆಯು ಆತನ ಸ್ವಂತ ಅಧಿಕಾರದಲ್ಲಿ ಸಮಯಗಳನ್ನು ಮತ್ತು ಋತುಗಳನ್ನು ಹೊಂದಿದ್ದಾನೆ ಎಂಬುದಾಗಿ ಕರ್ತನು ಪ್ರತಿಕ್ರಿಯಿಸಿದ್ದು ನಮಗೆ ಉಪದೇಶಿಸುತ್ತದೆ. ಯೇಸುವು ''ಕ್ರೊನೊಸ್'' (**Kronos**) ಮತ್ತು ''ಕೈರೋಸ್'' (**Kairos**) ಎಂಬುದರ ಕುರಿತು ಮಾತಾಡಿದ್ದಾನೆ ''ಕ್ರೊನೊಸ್'' ಎಂಬ ಗ್ರೀಕ್ ಪದವು ಸಮಯದ ಅವಧಿ, ಸಮಯದ ಪ್ರಮಾಣ ಅಥವಾ ವಿಸ್ತಾರವನ್ನು ಸೂಚಿಸುತ್ತದೆ ''ಕೈರೋಸ್'' ಸಮಯದ ವಿಧ ಅಥವಾ ಗುಣಮಟ್ಟವನ್ನು ಸೂಚಿಸುತ್ತದೆ. ''ಕ್ರೊನೊಸ್'' ಸಮಯದ ಉದ್ದ ಅಥವಾ ಒಂದು ವ್ಯಾಪ್ತಿಯು ಸಮಯದ ಅವಧಿಯನ್ನು ಅಳೆಯುವ ಸಮಯದಂತೆ ಉಪಯೋಗಿಸಲ್ಪಟ್ಟಿದೆ. ''ಕೈರೋಸ್'' ವಿಶಿಷ್ಟವಾಗಿ ಜರುಗುವಂತಹ, ಸೂಕ್ತವಾದ ಕ್ಷಣಗಳು, ನಿರ್ಣಾಯಕ ಘಟನೆಗಳು ಮತ್ತು ಸಮಯದ ಬದಲಾವಣೆಗಳನ್ನು ಸೂಚಿಸುತ್ತದೆ. ಇದು ''ಸಂಪೂರ್ಣವಾದ ಸಮಯ''ವನ್ನು ಸೂಚಿಸುತ್ತದೆ. – ಪ್ರಸ್ತುತ ಸಮಯದ ಯಾವುದೇ ಘಟನೆಯು ಉತ್ತಮವಾಗಿ ಸೂಕ್ತವಾಗಿರುತ್ತವೆ.

ನಿರ್ದಿಷ್ಟವಾದ ಸಮಯಗಳು ಮತ್ತು ಋತುಗಳನ್ನು ತಂದೆಯು ''ಆತನ ಬಲದಲ್ಲಿ'' ರಹಸ್ಯವಾಗಿ ಇಟ್ಟಿದ್ದಾನೆ. ಸತ್ಯವೇದವು ಅದನ್ನು ನಮಗೆ ಹೀಗೆ ಬೋಧಿಸುತ್ತದೆ ''ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿಯವರ ಪಾಲಾಗಿರುವವು'' (ಧರ್ಮೋಪದೇಶಕಾಂಡ 29:29) ಎರಡನೇ ಬರೋಣ ಮತ್ತು ಯುಗದ ಅಂತ್ಯದ ಬಗ್ಗೆ ಯೇಸು ಹೇಳಿದ್ದೇನೆಂದರೆ ''ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು.

ಪರಲೋಕದಲ್ಲಿರುವ ದೂತರಿಗೂ ತಿಳಿಯದು ಮಗನಿಗೂ ತಿಳಿಯದು ಆ ಕಾಲವು ಯಾವಾಗ ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ, ಜಾಗರೂಕರಾಗಿರಿ'' (ಮಾರ್ಕ 13:32,33) ಆದಾಗ್ಯೂ ದೇವರು ಪ್ರಕಟಿಸಲು ಅಪೇಕ್ಷಿಸುವ ''ಕೈರೋಸ್'' ಮತ್ತು ''ಕ್ರೊನೊಸ್''ಗಳನ್ನು ನಾವು ತಿಳಿದುಕೊಳ್ಳಬಾರದು ಎಂಬುದಾಗಿ ಅರ್ಥವಲ್ಲ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಎರಡರಲ್ಲೂ ಜನರು ಜೀವಿಸುವಂತಹ ಋತುಗಳು ಮತ್ತು ಕಾಲಗಳನ್ನು ಆತನ ಜನರು ತಿಳಿಯಬೇಕೆಂದು ದೇವರು ಎದುರುನೋಡುತ್ತಾನೆಂಬುದನ್ನು ನಾವು ನೋಡಬಹುದಾಗಿದೆ. ಆತನ ಗಡಿಯಾರದಲ್ಲಿ ಸಮಯವು ಅದು ಯಾವ ಸಮಯವಾಗಿದೆಂಬುದನ್ನು ಆತನ ಜನರು ತಿಳಿಯಬೇಕೆಂದು ದೇವರು ನಿರೀಕ್ಷಿಸುತ್ತಾನೆ.

## ಸತ್ಯವೇದದಲ್ಲಿ ''ಸಮಯ''

ಸಮಯದ ಕುರಿತು ಸತ್ಯವೇದದ ದೃಷ್ಟಿಕೋನಗಳು ಎಂಬ ಟಿಪ್ಪಣಿಯಲ್ಲಿ (ಮರ್ಸರ್ ಡಿಕ್ಸ್‌ನರಿ ಆಫ್ ದಿ ಬೈಬಲ್, 1990) ರಲ್ಲಿ ಸೈಮನ್ ಜೆ. ಡೆವ್ರೀಸ್ ಹೀಗೆ ವ್ಯಾಖ್ಯಾನಿಸುತ್ತಾನೆ.

''ಸಮಯದ ಇಬ್ರಿಯ ಕಲ್ಪನೆಯ ಬಗ್ಗೆ ಅತೀ ಮುಖ್ಯವಾಗಿದ್ದುದ್ದೇನೆಂದರೆ ಅವರು ಪ್ರತಿ ಹೊಸ ದಿನವು ಇತರೆ ಎಲ್ಲಾ ದಿನಗಳಿಗಿಂತ ಗುಣಾತ್ಮಕವಾಗಿ ಭಿನ್ನವಾಗಿರುತ್ತದೆ. ಎಂದು ಅವರು ನಿರೀಕ್ಷಿಸಿದ್ದರು. ಬಹುಶಃ ಒಂದು ಅನನ್ಯ ಪುನರಾವರ್ತಿಸಲಾಗದ ಘಟನೆಯನ್ನು ಉಂಟುಮಾಡಬಹುದು ಇದರಲ್ಲಿ ದೇವರು ದೈವಿಕತೆಯನ್ನು ಕೆಲವು ವಿಶೇಷ ಮತ್ತು ನಿರ್ಣಾಯಕ ರೀತಿಯಲ್ಲಿ ಬಹಿರಂಗಪಡಿಸಬಹುದು. ಅದಕ್ಕಾಗಿಯೇ ಸತ್ಯವೇದವು ದಿನಗಳ ಅವಧಿಯನ್ನು ಅವರ ಅತ್ಯಂತ ಗಮನಾರ್ಹ ಘಟನೆಯ ಪ್ರಕಾರ ಮಾತನಾಡುವ ವಿಶಿಷ್ಟ ವಿಧಾನವನ್ನು ಅಭಿವೃದ್ಧಿಪಡಿಸಿದೆ.'' ಅವನು ಮುಂದುವರೆದು ಕೆಳಗಿನಂತೆ ವ್ಯಾಖ್ಯಾನಿಸುತ್ತಾನೆ. ಸತ್ಯವೇದದ ಜನರು ಅವರ ದೇವರು ಎಲ್ಲಿಯಾದರೂ ಮತ್ತು ಯಾವುದೇ ಸಮಯದಲ್ಲಿ ಅವರನ್ನು ಭೇಟಿಯಾಗಬಹುದೆಂದು ನಂಬಿದ್ದರು. ಮತ್ತು ಎಲ್ಲಾ ಇತಿಹಾಸವು ಮತ್ತು ಎಲ್ಲಾ ಸ್ಥಳವೂ ದೇವರ ಆದಿಪತ್ಯ ಅಥವಾ ಪ್ರಾಂತವಾಗಿತ್ತು. ಇದಕ್ಕಾಗಿಯೇ ಸತ್ಯವೇದವು ಉದ್ದೇಶದ ಮತ್ತು ಪ್ರಗತಿಯ ಪ್ರಜ್ಞೆ, ಒಂದು ಗುರಿ, ಪ್ರಕ್ರಿಯೆ, ಒಂದು ಅಂತ್ಯ ಹೊಂದಿದೆ. ಸತ್ಯವೇದದಲ್ಲಿ ಸಮಯವು ಪ್ರಾಮುಖ್ಯವಾದ ಘಟಕವಾಗಿದ್ದು ಉಲ್ಲೇಖಗಳು ವಿಭಿನ್ನವಾದ ಬಗೆಯ ಕಾಲ - ವಿಭಿನ್ನವಾದ ''ಕೈರೋಸ್'' ಕ್ಷಣಗಳಲ್ಲಿ ಮಾಡಲ್ಪಟ್ಟಿವೆ. ಕೀರ್ತನೆಗಾರನು, ದೇವರನ್ನು ಕಂಡುಕೊಳ್ಳುವ ಒಂದು ಸಮಯ (ಕೀರ್ತನೆಗಳು 32:6), ದುಷ್ಟನ ಸಮಯ (ಕೀರ್ತನೆಗಳು 37: 18,19) ತೊಂದರೆಯ ಒಂದು ಸಮಯ (ಕೀರ್ತನೆಗಳು 41:1) ಮತ್ತು ಅಂಗೀಕಾರದ ಸಮಯ (ಕೀರ್ತನೆಗಳು 69:13) (2 ಕೊರಿಂಥದವರಿಗೆ 6:3) ಇವುಗಳ ಕುರಿತು ಮಾತನಾಡುತ್ತಾನೆ ಹೊಸ ಒಡಂಬಡಿಕೆಯಲ್ಲಿ ತಮ್ಮ ಗಡಿಗಳನ್ನು ನಿಗಧಿಪಡಿಸುವುದರ ಜೊತೆಗೆ ರಾಷ್ಟ್ರಗಳ ಉದಯ ಮತ್ತು ಪತನದ ಸಮಯವನ್ನು ದೇವರು ಸ್ವತಃ ನೇಮಿಸುತ್ತಾನೆ. ಎಂಬುದಾಗಿ ಕಲಿಯುತ್ತೇವೆ. (ಅಪೊಸ್ತಲರ ಕೃತ್ಯಗಳು 17: 26,27). ನಾವು ಜೀವಿಸುತ್ತಿರುವಂತಹ ಅವಧಿಯು ''ಕಡೆಯ ಸಮಯಗಳು'' (1 ತಿಮೊಥೆಯನಿಗೆ 4:1) ಮತ್ತು ''ಕೊನೆಯ ದಿನಗಳು'' ( 2 ತಿಮೊಥೆಯನಿಗೆ 3:1) ಎಂಬಂತಹ ಪದಗಳಿಂದ ಉಲ್ಲೇಖಿಸಲಾಗಿದೆ. ''ಕಾಲಗಳು ಮತ್ತು ಋತುಗಳು'' (1 ಥೆಸಲೋನಿಕದವರಿಗೆ 5:1) ''ಇವು ಕೊನೆಯ ಸಮಯಗಳು'' (1ಪೇತ್ರನು 1:20) '' ವಿವಿಧ ಸಮಯಗಳು'' ''ಹಿಂದಿನ ಸಮಯ'' (ಇಬ್ರಿಯರಿಗೆ 1:1) ಮತ್ತು

''ಅಗತ್ಯತೆಯ ಒಂದು ಸಮಯ'' (ಇಬ್ರಿಯರಿಗೆ 4:16) ಇಂತಹ ನುಡಿಗಟ್ಟುಗಳು ಸಹ ಕಂಡು ಹಿಡಿಯಲ್ಪಟ್ಟಿವೆ. ಸಮಯದ ಮೇಲೆ ಸತ್ಯವೇದದ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದು ಯಶಸ್ವಿ ಕ್ರೈಸ್ತ ನಡಿಗೆಯ ಒಂದು ಅವಿಭಾಜ್ಯ ಅಂಗವಾಗಿದೆ.

## ''ಕೈರೋಸ್'' ಅರ್ಥೈಸಿಕೊಳ್ಳುವುದು

ಸಾಮಾನ್ಯವಾಗಿ ''ಕೈರೋಸ್'' ನೇಮಿತ ಸಮಯ, ತಕ್ಕ ಕಾಲ ಅಥವಾ ಸರಿಯಾದ ಸಮಯ ಆಗಿದೆ. ಸಾಮಾನ್ಯವಾಗಿ ಮಾತನಾಡುವುದಾದರೆ ''ಕೈರೋಸ್'' ಕ್ಯಾಲೆಂಡರ್ ವರ್ಷಗಳ ಸಂಖ್ಯೆಯೊಡನೆ ಸಂಪರ್ಕ ಹೊಂದಿಲ್ಲ. ದೇವರು ವಿಶೇಷವಾಗಿ ಒಂದು ನಿರ್ದಿಷ್ಟವಾದ ಕಾಲದ ಅವಧಿಯನ್ನು ಉಲ್ಲೇಖಿಸದಿದ್ದರೆ, ''ಕೈರೋಸ್'' ಕಾಲವು ನಿರ್ದಿಷ್ಟ ಪರಿಸ್ಥಿತಿಗಳು, ಸನ್ನಿವೇಶಗಳು, ಸಂದರ್ಭಗಳು, ಜನರು, ಸಂಗತಿಗಳು ಇನ್ನೂ ಮುಂತಾದವುಗಳು ದೇವರು ನುಡಿದದ್ದನ್ನು ನೆರವೇರಿಸುವುದಕ್ಕಾಗಿ ಸರಿಯಾದ ಸಮಯವಾಗಿದೆ ಎಂಬುದನ್ನು ಮಾಡಲ್ಪಡುವುದರ ಮೇಲೆ ಅವಲಂಬಿತವಾಗಿದೆ.

ಉದಾಹರಣೆಗೆ, ವೈಯಕ್ತಿಕ ಪ್ರವಾದನೆಯು ನೆರವೇರುವುದು ''ಕೈರೋಸ್'' ಸಮಯದಲ್ಲಿ ಜರುಗುತ್ತದೆ.

ನೀವು ತುಂಬಾ ವ್ಯಾಪಾರದಲ್ಲಿ ಯಶಸ್ವಿಯಾಗುತ್ತೀರಿ, ಎಂಬುದಾಗಿ ನಿರ್ದಿಷ್ಟ ವ್ಯಕ್ತಿಗಳನ್ನು ಒಂದು ಪ್ರವಾದನಾ ವಾಕ್ಯವನ್ನು ಪಡೆದುಕೊಂಡರೆ ರಾತ್ರೋರಾತ್ರಿ ಅವನ ಯಶಸ್ಸು ಬರುತ್ತದೆ. ಎಂಬುದಾಗಿ ಅರ್ಥವಲ್ಲ. ಈ ಪ್ರವಾದನೆಯ ನೆರವೇರುವಿಕೆಯು, ದೇವರು ಎದುರು ನೋಡುತ್ತಿರುವಂತಹ ನಿರ್ದಿಷ್ಟವಾದ ಪರಿಸ್ಥಿತಿಗಳು ಈ ವ್ಯಕ್ತಿಯ ಜೀವಿತದಲ್ಲಿ ಒಟ್ಟಾಗಿ ಬರುವಾಗ ಇದು ನೆರವೇರುತ್ತದೆ. ಪ್ರವಾದನಾ ವಾಕ್ಯವನ್ನು ಪಡೆದ ಒಬ್ಬ ವ್ಯಕ್ತಿಯು ಒಬ್ಬ ಯೌವ್ವನಸ್ಥನಾಗಿದ್ದರೆ, ಬಹುಶಃ ಈ ವ್ಯಕ್ತಿಯು ತನ್ನ ಸ್ವಂತ ವ್ಯಾಪಾರ ಉಧ್ಯಮ ಪ್ರಾರಂಭಿಸಲು ಶಕ್ತನಾಗುವ ಮೊದಲು ಕೆಲವು ವರ್ಷಗಳು ಕೆಲಸ ಮಾಡಬೇಕು ಮತ್ತು ಕೆಲವು ತರಬೇತಿಗಳನ್ನು ಹಾದು ಹೋಗಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ.

ಈ ಯುವಕನು ತನ್ನ ಉಧ್ಯಮ ವ್ಯವಹಾರವನ್ನು ಪ್ರಾರಂಭಿಸಿದ ನಂತರ, ಅವನಿಗೆ ಒಂದು ದೊಡ್ಡ ಆಲೋಚನೆ ಬರುವ ಮೊದಲು ಇನ್ನೂ ಹಲವು ವರ್ಷಗಳಾಗಬಹುದು ಅದು ಅಂತಿಮವಾಗಿ ಅವನನ್ನು ಅತ್ಯಂತ ಯಶಸ್ವಿಯಾಗಿಸುತ್ತದೆ. ಪ್ರವಾದನೆ ಮಾತು ನಿಜವಾಗಿದ್ದರೂ ಎಲ್ಲಾ ಇಂತಹ ಪರಿಸ್ಥಿತಿಗಳು ನಡೆದಾಗ ಮತ್ತು ''ಕೈರೋಸ್'' ಕ್ಷಣ ಬಂದಾಗ ಮಾತ್ರ ಅದು ಕಾರ್ಯರೂಪಕ್ಕೆ ಬರುತ್ತದೆ.

# 2

# ಸಮಯವನ್ನು ಗುರುತಿಸುವುದು ಮತ್ತು ಪುನಃ ಪಡೆದುಕೊಳ್ಳುವುದು

ಎಫೆಸದವರಿಗೆ 5:15–17
**ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ, ಈ ದಿನಗಳು ಕೆಟ್ಟವುಗಳಾವೆ ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳಿದವರಾಗಿರ್ರಿ.**

ಕೊಲೊಸ್ಸೆಯವರಿಗೆ 4:5
**ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ.**

ದೇವರ ವಾಕ್ಯವು ಸಮಯವನ್ನು  ನಾವು ಮತ್ತೆ ಗಳಿಸಬೇಕೆಂಬುದಾಗಿ (ಕೈರೋಸ್) ಹೇಳುತ್ತದೆ. ''ಸಮಯವನ್ನು ಪುನಃ ಪಡೆದುಕೊಳ್ಳುವುದು'' ನಮ್ಮ ಜೀವಿತದಲ್ಲಿ ತಕ್ಕ ಕ್ಷಣಗಳನ್ನು ವಶಮಾಡಿಕೊಳ್ಳುವುದು ಮತ್ತು ಗುರುತಿಸಲು ಶಕ್ತವಾಗಿರುವುದನ್ನು ಸೂಚಿಸುತ್ತದೆ. ಮೇಲಿನ ವಾಕ್ಯ ಭಾಗದ ಸನ್ನಿವೇಶದಲ್ಲಿ ನಾವು ಜ್ಞಾನವಂತರಾಗಿ ಮತ್ತು ಕರ್ತನ ಚಿತ್ತದ ತಿಳುವಳಿಕೆಯಲ್ಲಿ ಸೂಕ್ಷ್ಮವಾಗಿ ನಡೆದರೆ ಮಾತ್ರವೇ ಇದು ಸಾಧ್ಯಕರವಾಗುತ್ತದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನಮ್ಮ ಜೀವಿತದಲ್ಲಿ ತಕ್ಕ ಕಾಲಗಳನ್ನು ಸ್ವಾಧೀನಪಡಿಸಿಕೊಳ್ಳುವುದರ ನಮ್ಮ ಸಾಮರ್ಥ್ಯವು ನಮ್ಮ ವೈಯಕ್ತಿಕವಾದ ಜೀವಿತದಲ್ಲಿ ದೇವರ ಚಿತ್ತದ ನಮ್ಮ ತಿಳುವಳಿಕೆಯ ಮೇಲೆ ಆತುಕೊಂಡವರಾಗಿ ಸರಿಯಾದ ಸಮಯದಲ್ಲಿ ಸರಿಯಾದ ಕಾರ್ಯಗಳನ್ನು ಮಾಡುವುದಾಗಿದೆ. ನಮ್ಮ ವೈಯಕ್ತಿಕ ಜೀವಿತಗಳಿಗೆ ದೇವರು ''ಕ್ರೊನೋಸ್'' ಮತ್ತು ''ಕೈರೋಸ್'' ಸಮಯ ನೇಮಿಸುತ್ತಾನೆ. ಪ್ರತಿಯೊಬ್ಬರು ಒಂದು ''ಕ್ರೊನೋಸ್'' ಸಮಯ  ಅಥವಾ ಸುದೀರ್ಘವಾಗಿ ಜೀವಿಸುವ ಸಮಯ ಹೊಂದಿದ್ದೇವೆ ''ನಿಮಗೆ ಸಂಪೂರ್ಣವಾದ ಆಯುಸ್ಸನ್ನು ಕೊಡುವೆನು'' (ವಿಮೋಚನ ಕಾಂಡ 23:26) ದೇವರು ಆತನ ಮಕ್ಕಳಿಗೆ ವಾಗ್ದಾನ ಮಾಡಿದ್ದಾನೆ. ದೇವರ ಒಂದು ಸಾಮಾನ್ಯ ಚಿತ್ತವು ''ನಮ್ಮ

ಆಯುಷ್ಕಾಲವು ಎಪ್ಪತ್ತು ವರುಷ ಬಲ ಹೆಚ್ಚಿದರೆ ಎಂಭತ್ತು'' (ಕೀರ್ತನೆಗಳು 90:10) ಈ ರೀತಿಯಾಗಿ ಪ್ರಕಟಿಸುತ್ತದೆ.

ದೇವರು ನಮ್ಮನ್ನು ''ದೀರ್ಘಾಯುಷ್ಯದೊಡನೆ'' ತೃಪ್ತಿಪಡಿಸುವೆನು ಎಂಬುದಾಗಿ ವಾಗ್ದಾನ ಮಾಡಿದ್ದಾನೆ (ಕೀರ್ತನೆಗಳು 91:16) ''ಸುಗ್ಗಿಕಾಲದಲ್ಲಿ ತಿನಿಸಿವುಡು (ಮನೆಗೆ) ಸೇರುವಂತೆ ನೀನು ವೃದ್ದಾಪ್ಯದಲ್ಲಿ ಸಮಾಧಿ ಸೇರುವಿ'' (ಯೋಬನು 5:26) ದೇವರ ಮಕ್ಕಳು ದಾಟಿಹೋಗುವಂತಹ ಅವಕಾಶವಿದೆ. ಹೆಚ್ಚು ಸ್ಪಷ್ಟವಾಗಿ, ನಮ್ಮ ವೈಯಕ್ತಿಕ ಜೀವಿತಗಳಿಗೆ ದೇವರು ಸಮಯಗಳು ಮತ್ತು ಋತುಗಳನ್ನು ಹೊಂದಿದ್ದಾನೆ

ಈ ನಿರ್ದಿಷ್ಟ ಸಮಯಗಳು ಮತ್ತು ಋತುಗಳು ನಾವು ಗುರುತಿಸುವಂತಹ ಪುನಃ ಪಡೆದುಕೊಳ್ಳುವಂತಹ ಅವಶ್ಯಕತೆಯನ್ನು ನಮ್ಮ ಜೀವಿತದಲ್ಲಿ ಹೊಂದಿರುವ ''ಕೈರೋಸ'' ಕಾಲಗಳಾಗಿದೆ. ನಾವು ಅವಕಾಶಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು.

ಈಗ ನಿಮ್ಮ ಜೀವಿತದಲ್ಲಿ ''ಕೈರೋಸ್'' ಏನಾಗಿದೆ? ನೀವು ಇರುವಂತಹ ಜೀವಿತದ ಋತು ಯಾವುದು? ಇದು ಒಂದು ಸಿದ್ಧತೆಯ ಅಥವಾ ಕಾರ್ಯ ಮಾಡುವ ಸಮಯವಾಗಿದೆಯಾ? ಕ್ರೈಸ್ತೀಯ ಜೀವಿತದಲ್ಲಿ ಒಂದು ನಿರ್ದಿಷ್ಟವಾದ ವಿಷಯಾಂಶಗಳ ಕುರಿತು ಕಲಿಯುವಂತಹ ಸಮಯವಾಗಿದೆಯಾ? ಒಂದು ನಿರ್ದಿಷ್ಟವಾದ ಸಂಬಂಧವನ್ನು ನೀವು ಕಟ್ಟಿಕೊಳ್ಳುವ ಒಂದು ಸಮಯವಾಗಿದೆಯಾ? ಕ್ಷಿಪ್ರ ಆತ್ಮಿಕ ಬೆಳವಣಿಗೆಯ ಇತ್ತೀಚಿನ ಘಟನೆಗಳು ಕ್ರೋಢಿಕರಣ ಮತ್ತು ನೀವು ನಿಲುಗಡೆಗೊಳಿಸುವ ಸಮಯವಾಗಿದೆಯಾ? ನಿರ್ದಿಷ್ಟವಾದ ವಿಷಯಾಂಶಗಳ ಕುರಿತು ನೀವು ಅಧ್ಯಯನ ಮಾಡುವುದು ಮತ್ತು ಸಂಶೋಧನೆ ಮಾಡುವಂತಹ ಒಂದು ಸಮಯವಾಗಿದೆಯಾ? ಸೇವೆ ಮಾಡಲೂ ಅಥವಾ ಮುನ್ನೆಡಸಲು ನಿಮಗೆ ಇದು ಒಂದು ಸಮಯವಾಗಿದೆಯಾ? ನಾವು ಇರುವಂತಹ ಜೀವಿತದ ನಿರ್ದಿಷ್ಟ ಋತುಗಳನ್ನು ಗುರುತಿಸಲು ಶಕ್ತವಾದಾಗ, ಒಂದು ನಿರ್ದಿಷ್ಟ ಉದ್ದೇಶವನ್ನು ನೆರವೇರಿಸಲು ನಮ್ಮ ಸಮಯವನ್ನು ಪುನಃ ಪಡೆದುಕೊಳ್ಳಲೂ ನಮಗೆ ಸಾಧ್ಯವಾಗುತ್ತದೆ.

ಒಂದು ಸಂದರ್ಭದಲ್ಲಿ ಕರ್ತನಾದ ಯೇಸುವು ಯೆರೂಸಲೇಮನ್ನು ಸಮೀಪಿಸಿದಾಗ, ಆತನು ನಗರವನ್ನು ನೋಡಿ ಕಣ್ಣೀರಿಟ್ಟನು. ಮುಂದಿನ ಯೆರೂಸಲೇಮಿನ ನಾಶವನ್ನು ಘೋಷಿಸುವವನಾಗಿ''....ನಿನಗೆ ದರ್ಶನ ಕೊಟ್ಟ ಸಮಯವನ್ನು ನೀನು ತಿಳುಕೊಳ್ಳಲಿಲ್ಲವಾದದರಿಂದ'' (ಲೂಕ 19:41-14) ಆತನು ಹೀಗೆ ಘೋಷಿಸಿದ್ದಾನೆ. ಯೆರೂಸಲೇಮಿಗೆ ದೇವರು ''ಸಂದರ್ಶನದ ಸಮಯವನ್ನು

ನಿಗಧಿ ಮಾಡಿದ್ದನು ಆದರೆ ನಗರದ ಜನರಿಗೆ ಅದರ ಬಗ್ಗೆ ತಿಳಿದಿರಲಿಲ್ಲ. ನಮ್ಮ ವೈಯಕ್ತಿಕ ಜೀವಿತಗಳಿಗೂ ದೇವರು ಒಂದು ವಿಶೇಷವಾದ ಸಂದರ್ಶನದ ಭೇಟಿಯ ಸಮಯವನ್ನು ನಿಗಧಿ ಮಾಡಿದ್ದಾನೆಂಬುದಾಗಿ ನಾನು ನಂಬುತ್ತೇನೆ. ನಮ್ಮ ಜೀವಿತದ ಋತುಗಳಲ್ಲಿ ನಮ್ಮ ಜೀವಿತಕ್ಕಾಗಿ ಆತನು ಹೊಂದಿರುವ ಯೋಜನೆ ಮತ್ತು ಉದ್ದೇಶಗಳನ್ನು ಅನಾವರಣಗೊಳಿಸುತ್ತಾನೆ. ಅಥವಾ ನಿರ್ದಿಷ್ಟವಾದ ಮಾರ್ಗದರ್ಶನವನ್ನು ನಮಗೆ ಕೊಡುತ್ತಾನೆ. ಅಥವಾ ನಮ್ಮಲ್ಲಿ ನಿರ್ದಿಷ್ಟವಾಧ ಒಂದು ವರವನ್ನು ಬಿಡುಗಡೆಗೊಳಿಸುತ್ತಾನೆ ಮತ್ತು ಪಾಲು ಕೊಡುತ್ತಾನೆ. ಇಂತಹ ವಿಶೇಷ ಕಾರ್ಯವನ್ನು ನಮ್ಮ ಹೃದಯದಲ್ಲಿ ಮಾಡುತ್ತಾನೆ. ಆದರೆ ಈ ಒಂದು ಸಂದರ್ಶನದ ಸಮಯದಲ್ಲಿ ಅಧಿಕವಾದ ಫಲಿತಾಂಶವು ಏನಾಗಿರುತ್ತದೆಂಬುದು ಹೆಚ್ಚಾಗಿ ನಿಮ್ಮ ಪ್ರತಿಕ್ರಿಯೆಯ ಮೇಲೆ ಆಧಾರಿತಗೊಂಡಿರುತ್ತದೆ. ಸಂದರ್ಶನದ ಸಮಯದ ಅರಿವಿಲ್ಲದವರು ನಾವಾಗಿದ್ದರೆ, ದೇವರು ನಮ್ಮಿಂದ ಹಾದು ಹೋಗಬೇಕಾಗಿರುತ್ತದೆ. ನೀವು ದೇವರಿಗೆ ಲಕ್ಷ್ಯವಿಡುವವರಾಗಿದ್ದೀರಾ ಮತ್ತು ಪ್ರಸ್ತುತದಲ್ಲಿ ಆತನು ನಿಮ್ಮ ಜೀವಿತದಲ್ಲಿ ಬಿಚ್ಚುತ್ತಿರುವವುಗಳಿಗೆ ಸೂಕ್ಷ್ಮ ಪರಿಜ್ಞಾನವುಳ್ಳವರಾಗಿದ್ದೀರಾ? ಆತನು ಮಾಡುತ್ತಿರುವವುಗಳಿಗೆ ನೀವು ಹೇಗೆ ಪ್ರತಿಕ್ರಿಯೆ ತೋರಿಸುತ್ತಿದ್ದೀರಾ?

## ಸಮಯಕ್ಕೆ ಸರಿಯಾಗಿ ಮತ್ತು ಹಂತಹಂತವಾಗಿ

ಪ್ರಸಂಗಿ 3:17
**ಎಲ್ಲಾ ಕೆಲಸಕಾರ್ಯಗಳಿಗೂ ತಕ್ಕ ಸಮಯವುಂಟಲ್ಲವೆ ಅಂದುಕೊಂಡೆನು**

ಪ್ರಸಂಗಿ 3:17
**ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯ ತೀರ್ಪೂ ಇರುವವಲ್ಲವೆ**

ಪ್ರತಿಯೊಂದು ಉದ್ದೇಶಗಳಿಗೂ ಸರಿಯಾದ ಸಮಯವಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಒಂದು ಪರಿಸ್ಥಿತಿಗೆ ಅನುಗುಣವಾಗಿ ನಾವು ಏನು ಮಾಡಬೇಕೆಂಬುದಾಗಿ ಅಪೇಕ್ಷಿಸುತ್ತಾನೆ ಆದರೆ ಸರಿಯಾದ ಸಮಯದಲ್ಲಿ ಕಾರ್ಯಗಳನ್ನು ಕೊಂಡ್ಯೊಯುವಂತಹ ಪ್ರಾಮುಖ್ಯತೆಯನ್ನು ಸಮಾನಾಂತರವಾಗಿ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ತುಂಬಾ ಆಗಾಗ್ಗೆ ಒಂದು ವಿಚಾರ, ಯೋಜನೆ, ಕಾರ್ಯತಂತ್ರ ಅಥವಾ ಕರ್ತನಿಂದ ಒಂದು ದರ್ಶನವನ್ನು ಪಡೆಯುತ್ತೇವೆ ಮತ್ತು ಅದು ತಕ್ಷಣದಲ್ಲಿಯೇ ನೆರವೇರಬೇಕೆಂಬುದಾಗಿ ನೋಡುವುದನ್ನು ಅಪೇಕ್ಷಿಸುತ್ತೇವೆ ಅಥವಾ ಕೂಡಲೇ ಹೋಗಿ ಅದನ್ನು ಮಾಡಬೇಕೆಂಬುದಾಗಿ ಬಯಸುತ್ತೇವೆ. ದೇವರು ಒಂದು ಯೋಜನೆಯನ್ನು ನೆರವೇರಿಸಲೂ ಮತ್ತು ಬಿಚ್ಚಿಡಲೂ ಒಂದು ನಿರ್ದಿಷ್ಟವಾದ

ಕಾಲವನ್ನು ಆತನು ಹೊಂದಿದ್ದಾನೆ ಎಂಬುದನ್ನು ಕಠಿಣಮಾರ್ಗವಾಗಿ ನಾನು ಕಲಿತಿದ್ದೇನೆ.. ಆತನ ಉದ್ದೇಶಗಳು ಮತ್ತು ಯೋಜನೆಗಳನ್ನು ತಿಳಿಯುವುದು ಮಾತ್ರವಲ್ಲದೇ, ಅವುಗಳ ನೆರವೇರುವಿಕೆಗೆ ಆತನ ಸಮಯವನ್ನು ಅರ್ಥಮಾಡಿಕೊಳ್ಳುವುದು ನಮ್ಮ ಜವಬ್ದಾರಿಯಾಗಿದೆ. ನಾವು ಹಂತ ಹಂತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಮುಂದೆಯು ಅಲ್ಲ ಹಿಂದೆಯೂ ಅಲ್ಲ ದೇವರೊಡನೆ ನಡೆಯಬೇಕು.

ನಾವು ಇಲ್ಲಿ ಚರ್ಚಿಸುತ್ತಿರವಂತದ್ದಕ್ಕೆ ಅರಸನಾದ ದಾವೀದನ ಜೀವಿತದ ಎರಡು ಘಟನೆಗಳನ್ನು ಸ್ಪಷ್ಟಪಡಿಸುತ್ತೇವೆ ಎಲ್ಲಾ ಇಸ್ರಾಯೇಲ ಮೇಲೆ ದಾವೀದನನ್ನು ಅರಸನಾಗಿ ದೇವರು ಗೊತ್ತುಪಡಿಸಿದ್ದನು. ದಾವೀದನು ಇನ್ನೂ ಚಿಕ್ಕ ಹುಡುಗನಾಗಿದ್ದಾಗ ಪ್ರವಾದಿ ಸಮುವೇಲನಿಂದ ಅಭಿಷೇಕಿಸಲ್ಪಟ್ಟಿದ್ದನು ಎಣ್ಣೆಯೊಂದಿಗೆ ಅಭಿಷೇಕಿಸುವಂತದ್ದು ದಾವೀದನು ಅರಸನಾಗಿ ದೇವರಿಂದ ಆರಿಸಿಕೊಂಡಿದ್ದಾನೆ ಎಂಬ ಸಂಗತಿಯನ್ನು ಪ್ರತಿನಿಧಿಸುತ್ತದೆ. ದಾವೀದನು ಗೊಲ್ಯಾತನ ಮೇಲೆ ಜಯಸಾಧಿಸಿದ ಮೇಲೆ ಒಬ್ಬ ರಾಷ್ಟ್ರೀಯ ನಾಯಕನಾದನು ಅವನ ಜೀವಿತವನ್ನು ಸಂರಕ್ಷಿಸಿಕೊಳ್ಳಲೂ ಅರಸನಾದ ಸೌಲನಿಂದ ಓಡಿ ಹೋಗಬೇಕಾಯಿತು. ದಾವೀದ ಒಂದು ಕ್ರೂರ ಪ್ರಾಣಿಯಂತೆ ಬೇಟೆಯಾಡಲ್ಪಟ್ಟನು ಗುಹೆಗಳಲ್ಲಿ ಅವನ ವಾಸಸ್ಥಾನ ಮಾಡಿಕೊಂಡು ಒಬ್ಬ ಅಲೆಮಾರಿಯಂತೆ ಜೀವಿಸಿದ್ದನು. ವರ್ಷಗಳು ಕಳೆದವು ಆದರೆ ಈ ಸಮಯದುದ್ದಕ್ಕೂ ದಾವೀದನು ದೇವರಿಗೆ ಸತ್ಯವಂತನಾಗಿ ಉಳಿದಿದ್ದನು. ಅಂತಿಮವಾಗಿ ಸೌಲನು ಒಂದು ಯುದ್ಧದಲ್ಲಿ ಕೊಲ್ಲಲ್ಪಟ್ಟನು. ಅದನ್ನು ದಾವೀದನು ಕೇಳಿದಾಗ ಸೌಲನಿಗೂ ಮತ್ತು ಅವನ ಮನೆಯವರಿಗೂ ತೀವ್ರ ಪಶ್ಚಾತ್ತಾಪದಿಂದ ತುಂಬಿದವನಾದನು. ''ಅನಂತರ ದಾವೀದನು ಯೆಹೋವನನ್ನು ನಾನು ಯೆಹೂದ ದೇಶದ ಯಾವುದಾದರೊಂದು ಪಟ್ಟಣಕ್ಕೆ ಹೋಗಬಹುದೋ ಎಂದು ಕೇಳಲು ಆತನು ಹೋಗಬಹುದು ಅಂದನು ಅವನು ತಿರಿಗಿ ಯಾವ ಊರಿಗೆ ಹೋಗಲಿ ಎಂದು ಕೇಳಿದ್ದಕ್ಕೆ ಹೆಬ್ರೋನಿಗೆ ಹೋಗು ಎಂಬ ಉತ್ತರ ಸಿಕ್ಕಿತು. ಆಗ ದಾವೀದನು ತನ್ನ ಇಬ್ಬರು ಹೆಂಡತಿಯಾದ ಇಜ್ರೇಲಿನ ಅಹೀನೋವಮಳನ್ನೂ ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀಗೈಲಳನ್ನೂ ಕರಕೊಂಡು ಅಲ್ಲಿಗೆ ಹೋದನು ದಾವೀದನ ಜನರೂ ತಮ್ಮ ತಮ್ಮ ಕುಟುಂಬಗಳನ್ನು ಕರಕೊಂಡು ಅವನ ಜೊತೆಯಲ್ಲಿ ಹೋಗಿ ಹೆಬ್ರೋನಿಗೆ ಸೇರಿದ ಊರುಗಳಲ್ಲಿ ವಾಸಿಸಿದರು ತರುವಾಯ ಯೆಹೂದ್ಯರು ಅಲ್ಲಿಗೆ ಬಂದು ದಾವೀದನನ್ನು ಅಭಿಷೇಕಿಸಿ ತಮ್ಮ ಕುಲದ ಅರಸನ್ನಾಗಿ ಮಾಡಿಕೊಂಡರು'' (2ಸಮುವೇಲನು 2:1–4) ಮೇಲಿನಂತೆ ದಾವೀದನು ವಿಚಾರಣೆ ಮಾಡಿದನು.

ಸರಿಯಾದ ಸಮಯದಲ್ಲಿ ಸರಿಯಾಗಿ ಚಲನೆ ಮಾಡುವುದು ಯೆಹೂದ್ಯರ ಅರಸನಾಗಿ ಗುರುತಿಸಲ್ಪಡುವಂತೆ ದಾವೀದನನ್ನು ನಡೆಸಿತು. ಅವನು ಬಹಳ ಹಿಂದೆಯೇ ಇಸ್ರಾಯೇಲ್ಯರೆಲ್ಲರ ಮೇಲೆ ಅರಸನಾಗಿ ಗುರುತಿಸಲ್ಪಟ್ಟಿದ್ದನು. ದಾವೀದನು ದೇವರೊಂದಿಗೆ ಸಮಯಕ್ಕೆ ಸರಿಯಾಗಿ ಮತ್ತು ಹಂತಹಂತವಾಗಿ ನಡೆಯಲು ಬಯಸಿದ ವ್ಯಕ್ತಿ ಎಂಬುದಾಗಿ ನಾವು ನೋಡುತ್ತೇವೆ. ಅವನು ಸಿಂಹಾಸನಕ್ಕೆ ನೇಮಿಸಲ್ಪಟ್ಟವನಾಗಿದ್ದಾಗಲೂ ಅವನು ಅಲ್ಲಿಗೆ ಹೋಗಲೂ ಅವನ ಪ್ರಯತ್ನಗಳಲ್ಲಿ ಅವನು ಆತುರ ಅಥವಾ ದುಡುಕಲಿಲ್ಲ. ಆತನ ಸಮಯದಲ್ಲಿ ದೇವರು ಆತನ ಯೋಜನೆಗಳನ್ನು ತೆರೆದಿಡುವಂತೆ ಅವನು ಅವಕಾಶ ನೀಡಿದನು. ಹಾಗೆಯೇ ದೇವರೊಂದಿಗೆ ಒಂದು ಸಮಯಕ್ಕೆ ಸರಿಯಾಗಿ ಒಂದು ಹೆಜ್ಜೆ ತೆಗೆದುಕೊಳ್ಳುವುದರ ಪ್ರಾಮುಖ್ಯತೆಯನ್ನು ದಾವೀದನು ಕಲಿತನು. ಅವನು ಹೆಬ್ರೋನಿಗೆ ಹೋಗುವಂತಹದ್ದರಲ್ಲಿ ಹೇಗೆ ಜಾಗರೂಕನಾಗಿದ್ದನು ಎಂಬುದನ್ನು ಗಮನಿಸಿರಿ. ಅವನ ಸರಿಯಾದ ಸಮಯದಲ್ಲಿ ಸರಿಯಾದ ನಡೆಯನ್ನು ತೆಗೆದುಕೊಂಡಾಗ ಸಂಗತಿಗಳು ಅವನ ಪರವಾಗಿ ಜರಗಲು ಪ್ರಾರಂಭಿಸಿದವು ಸರಿಯಾದ ಚಲನೆಗಳನ್ನು ಮಾಡುವುದು ನಿಮ್ಮ ಜೀವಿತಕ್ಕಿರುವ ದೇವ ಉದ್ದೇಶಗಳು ಮತ್ತು ಯೋಜನೆಗಳನ್ನು ನೆರವೇರಿಸಲೂ ನಿಮ್ಮನ್ನು ಸ್ಥಾನದಲ್ಲಿರಿಸಿ ಕೊಂಡಿರುವುದನ್ನು ನೋಡುತ್ತೀರಿ.

ದಾವೀದನ ಜೀವಿತದ ಎರಡನೇ ಘಟನೆಯು ದುರದುಷ್ಟವಾದದು ಯಾಕೆಂದರೆ ದಾವೀದನು ದೇವರೊಂದಿಗೆ ಸಮಯಕ್ಕೆ ತಕ್ಕಂತೆ ಮತ್ತು ಹಂತಹಂತವಾಗಿ ನಡೆಯುವುದರಲ್ಲಿ ಹೇಗೆ ಸೋತುಹೋದನು ಮತ್ತು ಸಮಯಕ್ಕೆ ಸರಿಯಾಗಿರದ ನಷ್ಟದ ತೀವ್ರ ಪರಿಣಾಮವನ್ನು ಅನುಭವಿಸಿದ್ದನು ಇದು ತೋರಿಸುತ್ತದೆ.

2 ಸಮುವೇಲನಿಗೆ 11:1,2

**ಮರುವರುಷ ಅರಸರು ಯುದ್ಧಕ್ಕೆ ಹೊರಡುವ ಸಮಯದಲ್ಲಿ ದಾವೀದನು ಯೋವಾಬನನ್ನೂ ತನ್ನ ಸೇವಕರನ್ನೂ ಎಲ್ಲಾ ಇಸ್ರಾಯೇಲ್ಯರನ್ನೂ ಯುದ್ಧಕ್ಕೆ ಕಳುಹಿಸಿದನು. ಇವರು ಹೋಗಿ ಅಮ್ಮೋನಿಯರ ಪ್ರಾಂತಗಳನ್ನೂ ಹಾಳುಮಾಡಿ ರಬ್ಬಕ್ಕೆ ಮುತ್ತಿಗೆಹಾಕಿದರು ದಾವೀದನು ಯೆರೂಸಲೇಮಿನಲ್ಲಿಯೇ ಇದ್ದನು. ಅವನು ಒಂದು ದಿವಸ ಸಂಜೀ ಹೊತ್ತಿನಲ್ಲಿ ಮಂಚದಿಂದೆದ್ದು ಅರಮನೆಯ ಮಾಳಿಗೆಯ ಮೇಲೆ ತಿರುಗಾಡುತ್ತಿರುವಾಗ ಅಲ್ಲಿಂದ ಬಹು ಸುಂದರಿಯಾದ ಒಬ್ಬ ಸ್ತ್ರೀ ಸ್ನಾನ ಮಾಡುವುದನ್ನು ಕಂಡನು.**

ಅರಸರುಗಳು ಅವರ ಪುರುಷರೊಡನೆ ಯುದ್ಧಕ್ಕೆ ಹೊರಟಂತಹ ವರ್ಷದ ಸಮಯವಾಗಿತ್ತು ಹಾಗಿದ್ದರೂ ದಾವೀದನು ಅವನ ಪುರುಷರನ್ನು ಯುದ್ಧಕ್ಕೆ ಕಳುಹಿಸಿ ಅವನು ಅರಮನೆಯಲ್ಲಿಯೇ ಉಳಿದುಕೊಂಡನು ಅವನು ತಪ್ಪಾದ ಸಮಯದಲ್ಲಿ ತಪ್ಪಾದ ಸ್ಥಳದಲ್ಲಿ ಇದ್ದನು. ಅವನು ಸುಂದರಿಯಾದ ಬೆತ್ಷಬೆಯಲಳನ್ನು ನೋಡಿದನು

ಮತ್ತು ಆಕೆಯೊಂದಿಗೆ ವ್ಯಭಿಚಾರ ಮಾಡಿದನು. ಈ ಕ್ರಿಯೆಯು ಅವನಿಗೆ ತುಂಬಾ ದುಃಖ ಮತ್ತು ವ್ಯಥೆಯನ್ನುಂಟುಮಾಡಿತು. ಈ ಸೋಲಿಗೆ ಕಾರಣವೇನಂದರೆ ದಾವೀದನು ತನ್ನ ಪುರುಷರೊಂದಿಗೆ ಯುದ್ಧ ಬೇಕಾಗಿದ್ದಂತಹದ್ದರ ಸಮಯದಲ್ಲಿ ಅವನು ಹೋಗದಿರುವುದನ್ನು ಆಯ್ಕೆ ಮಾಡಿಕೊಂಡತಹ ಸಾಮಾನ್ಯ ಕಾರಣವೇ ಆಗಿದೆ. ಅವನು ಮಾಡಿದಂತಹ ತೀರ್ಮಾನಗಳು ತಪ್ಪಾದ ಸ್ಥಳದಲ್ಲಿ ತಪ್ಪಾದ ಸಮಯದಲ್ಲಿ ಅವನನ್ನು ಇರಿಸಿದವು.

ನಾಲ್ಕು ಸುವಾರ್ತೆಗಳಲ್ಲಿ ಉಲ್ಲೇಖಿಸಿರುವಂತೆ ನಮ್ಮ ಕರ್ತನಾದ ಯೇಸುವು ಆತನ ಜೀವಿತವನ್ನು ಆಜ್ಞಾಪಿಸಿಕೊಂಡಂತಹ ರೀತಿಯನ್ನು ನೋಡುವುದಾದರೆ, ಆತನ ಜೀವಿತಕ್ಕಾಗಿ ತಂದೆಯ ಸಮಯವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದನು ಮತ್ತು ಸೂಕ್ಷ್ಮತೆಯುಳ್ಳವನಾಗಿದ್ದನು ಎಂಬುದನ್ನು ನಾವು ನೋಡುತ್ತೇವೆ. ಯೇಸುವು ಸೇವೆಯನ್ನು ಪ್ರಾರಂಭಿಸಲು 30 ವರ್ಷಗಳು ಕಾಯ್ದುಕೊಂಡಿದ್ದಕ್ಕೆ ಪ್ರಾಥಮಿಕ ಕಾರಣವೇನೆಂರೆ ಆತನ ಗಳಿಗೆಯು (ಘಂಟೆಯು) ಇನ್ನೂ ಬಂದಿಲ್ಲವೆಂಬುದಾಗಿ – ತಂದೆಯು ಆತನಿಗಾಗಿ ಅಭಿಷೇಕಿಸಲ್ಪಟ್ಟಿರುವಂತಹ ಸೇವೆಗೆ ಹೆಜ್ಜೆಯನ್ನಿಡಲು ಆತನಿಗೆ ಗಳಿಗೆಯು (ಘಂಟೆಯು) ಇನ್ನೂ ಬಂದಿಲ್ಲ ಎಂಬುದಾಗಿ ಆತನಿಗೆ ಗೊತ್ತಿತ್ತು. (ಯೋಹಾನ 2:4) ಯೆಶಾಯ 61 ರಿಂದ ಬಲಯುತವಾದ ಅಂತಹ ವಚನಗಳನ್ನು ಓದುವ ಮೂಲಕವಾಗಿ ಆತನ ಸೇವೆಯನ್ನು ಪ್ರಾರಂಭಿಸಿದನು. ಆ ಒಂದು ಪ್ರವಾದನಾ ಭಾಗವನ್ನು ಓದಿದ ಮೇಲೆ ಆತನ ಕೇಳುಗರಿಗೆ ಯೇಸುವು ಈ ರೀತಿ ಘೋಷಿಸಿದನು ''ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ'' (ಲೂಕ 4:21) ಆತನ ಸೇವೆಯನ್ನು ಪ್ರಾರಂಭಿಸಲೂ ತಂದೆಯ ಸಮಯವು ಯೇಸುವಿಗೆ ಗೊತ್ತಿತ್ತು. ಆತನ ಸಂದೇಶವು ಸಹ ಒಂದು ಸಮಯೋಚಿತ – ಋತುವಿನ ತಕ್ಕ ಮಾತುಗಳಾಗಿದ್ದವು. ಆತನು ಪಶ್ಚಾತ್ತಾಪದ ಕುರಿದು ಪ್ರಸಂಗಿಸುವವನ ಆಗಿ ಹೀಗೆ ಹೇಳಿದನು. ''ಕಾಲ ಪರಿಪೂರ್ಣವಾಯಿತು ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು'' (ಮಾರ್ಕ 1:15) ಆತನು ಒಂದು ಹೊಸ ಯುಗದ ಪ್ರಾರಂಭವನ್ನು ಸಾರಿದನು ಮತ್ತು ಆ ಒಂದು ಸಮಯದಲ್ಲಿ ಭೂಮಿಯ ಮೇಲೆ ದೇವರು ಮಾಡುತ್ತಿದ್ದವುಗಳ ಕಡೆಗೆ ಜನರ ಗಮನವನ್ನು ಆತನ ಸಂದೇಶವು ಸೆಳೆದುಕೊಂಡಿತು. ಆ ಸಮಯಗಳಲ್ಲಿ ಅನ್ವಯಿಸಲ್ಪಡುವಂತದ್ದನ್ನು ಆತನು ಸಾರಿದನು ಮತ್ತು ಪ್ರಸಂಗಿಸಿದನು. ಭೂಮಿಯ ಮೇಲೆ ಮುಂಬರುವ ದೇವರ ಚಲನೆಗಳ ಕುರಿತು ಪ್ರಸ್ತುತದಲ್ಲಿ ತಂದೆಯು ಮಾಡುತ್ತಿರುವ ಕಾರ್ಯಗಳ ಕುರಿತು ಆತನು ಪೂರ್ಣವಾಗಿ ಗ್ರಹಿಕೆಯುಳ್ಳವನಾಗಿದ್ದನು. ''ಒಂದು ಕಾಲ ಬರುತ್ತದೆ''

ಎಂಬ ನುಡಿಗಟ್ಟನ್ನು ಜನರು ಆತ್ಮದಲ್ಲಿಯು ಮತ್ತು ಸತ್ಯದಲ್ಲಿಯು ಆರಾಧಿಸುವಂತಹ ಒಂದು ಸಮಯದ ಪ್ರಾರಂಭವನ್ನು ಉಲ್ಲೇಖಿಸಲೂ ಆತನು ಉಪಯೋಗಿಸಿದ್ದಾನೆ. (ಯೋಹಾನ 4:21,23) ಮತ್ತು ಆತನು ಮರಣದಿಂದ ಮುಂಬರುವ ಪುನರುತ್ಥಾನದ ಕುರಿತು ಉಲ್ಲೇಖಿಸಿದ್ದಾನೆ. (ಯೋಹಾನ 5:25) ಇನ್ನೊಂದು ಸ್ಥಳದಲ್ಲಿ, ಆತನ ಶಿಷ್ಯರೊಂದಿಗೆ ಆತನು ಸಾಮ್ಯರೂಪವಾಗಿ ಮಾತಾನಾಡದೆ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವ ಕಾಲ ಬರುತ್ತದೆ. ಎಂಬುದಾಗಿ ಒಂದು ಬರಲಿರುವ ಕಾಲದ ಬಗ್ಗೆ ಆತನು ಮಾತಾನಾಡಿದ್ದಾನೆ. (ಯೋಹಾನ 16:25)

ಭೂಮಿಯ ಮೇಲೆ ದೇವರ ಕಾರ್ಯಗಳು ಅಥವಾ ನಿರ್ದಿಷ್ಟ ಚಲನೆಗಳು ಅಥವಾ ದೈವ ಸಂಕಲ್ಪಗಳು ಬಿಡುಗಡೆಗೊಳ್ಳಲೂ ಒಂದು ನಿರ್ದಿಷ್ಟವಾದ ಸಮಯವಿದೆ ಎಂಬುದನ್ನು ಇದರಿಂದ ನಾವು ಕಲಿಯುತ್ತೇವೆ. ಯೇಸುವು ಆತನು ಶಿಲುಬೆಗೇರಿಸುವಿಕೆಯ ಸಮಯದ ಬಗ್ಗೆ ಅರಿವುಳ್ಳನಾಗಿದ್ದನು. ಇದು ಆತನನ್ನು ಆಶ್ಚರ್ಯಚಕಿತನಾಗಿ ಮಾಡಲಿಲ್ಲ. ಆತನ ಶಿಷ್ಯರು ಚದುರಿಹೋಗುವ ಮತ್ತು ಆತನನ್ನು ಬಿಟ್ಟುಬಿಡುವ ಸಮಯವು ಬರುತ್ತದೆಂಬುದು ಆತನಿಗೆ ಗೊತ್ತಿತ್ತು. (ಯೋಹಾನ 16:323) ಮತ್ತು ಆತನು ಶಿಲುಬೆಗೇರಿಸಲ್ಪಡುತ್ತಾನೆಂಬುದು ತಿಳಿದಿತ್ತು. (ಯೋಹಾನ 13:1; 17:1) ವಾಸ್ತವವಾಗಿ, ಆತನು ಶಿಲುಗೇರಿಸಲ್ಪಡುವಂತಹ ಸಮಯವು ಇನ್ನೂ ಬರಬೇಕಿದೆ ಎಂಬ ಸಂಗತಿಯ ದೃಷ್ಟಿಕೋನದಲ್ಲಿ ಆತನ ಜೀವಿತವನ್ನು ಆಜ್ಞಾಪಿಸಿಕೊಂಡಿದನು (ಯೋಹಾನ 16:32) ''ಆದರೆ ಆತ್ಮನ ಕಾಲ ಇನ್ನೂ ಬಾರದೆ ಇದ್ದ ಕಾರಣ ಯಾರೂ ಆತನ ಮೇಲೆ ಕೈ ಹಾಕಲಿಲ್ಲ'' (ಯೋಹಾನ 7:30; 8:30) ಎಂಬುದಾಗಿ ಸತ್ಯವೇದ ಹೇಳುತ್ತದೆ. ನಮ್ಮ ಗುರುವಿನ ಜೀವಿತದ ಈ ತ್ವರಿತವಾದ ಅವಲೋಕನದಿಂದ, ಭೂಮಿಯ ಮೇಲೆ ಆತನು ತಂದೆಯ ಸಮಯ ಮತ್ತು ಯೋಜನೆಗಳ ಪ್ರಜ್ಞೆಯುಳ್ಳವನಾಗಿ ಆತನು ಜೀವಿಸಿದನು. ಎಂಬುದನ್ನು ನಾವು ನೋಡುತ್ತೇವೆ. ಆತನನ್ನು ಅನುಕರಿಸುವಂತದ್ದು ನಮಗೆ ಒಂದು ಸವಾಲು ಆಗಿದೆ.

ನಮ್ಮ ಜೀವಿತವನ್ನು ನಾವು ಹೇಗೆ ಆಜ್ಞಾಪಿಸಿಕೊಂಡಿದ್ದೇವೆ? ತಂದೆಯು ನಮಗಾಗಿ ಇಟ್ಟಿರುವ ಯೋಜನೆಗಳಿಗೆ ನಮ್ಮ ತಂದೆಯೊಡನೆ ಸಮಯಕ್ಕೆ ಸರಿಯಾಗಿ ಮತ್ತು ಹಂತಹಂತವಾಗಿ ಚಲಿಸುವುದನ್ನು ನಾವು ಹುಡುಕುತ್ತಿದ್ದೇವಾ ನಮ್ಮಲ್ಲಿ ಕೆಲವರು ದೇವರಿಂದ ಮುಂದೆ ಓಡುವಂತಹ ಸಾಧ್ಯತೆಯಲ್ಲಿ ಬೋರಲು ಬಿದ್ದಿರಬಹುದು. ಕರ್ತನಿಗಾಗಿ ಕಾದುಕೊಂಡಿರುವುದು ಮಾತ್ರವಲ್ಲದೆ ಕರ್ತನಿಗಾಗಿಯೇ ಕಾದುಕೊಂಡಿರುವಂತಹ ಸುದ್ಗುಣವನ್ನು ನಾವು ಬೆಳೆಸಿಕೊಳ್ಳುವುದು ಅವಶ್ಯಕವಾಗಿದೆ. ''ಆತನಿಗಾಗಿ ಕಾದುಕೊಂಡಿರುವವರಿಗಾಗಿ ದೇವರು ಕಾರ್ಯ

ಮಾಡುತ್ತಾನೆಂಬುದಾಗಿ'' (ಯೆಶಾಯ 64:4) ಸತ್ಯವೇದ ಬೋಧಿಸುತ್ತದೆ. ನನ್ನ ಆರಂಭಿಕ ಹದಿಹರೆಯದ ವಯಸ್ಸಿನಲ್ಲಿ ಹಲವಾರು ಸಂದರ್ಭಗಳಲ್ಲಿ ಕರ್ತನು ನನ್ನ ಜೀವಿತದ ಮೂಲಕವಾಗಿ ಕಾರ್ಯ ಮಾಡಲೂ ಮೊದಲು ಪ್ರಾರಂಭಿಸಿದಾಗ, ಆ ಕ್ಷೇತ್ರಗಳಿಗೆ ಮತ್ತು ಸೇವಾಮಾರ್ಗಗಳಿಗೆ ನನ್ನ ಮಾರ್ಗದಿಂದ ಒತ್ತಾಯ ಮಾಡಿಕೊಂಡೆನು. ಖಂಡಿತವಾಗಿಯು, ದೇವರು ಕರುಣೆಯುಳ್ಳವನು, ಈ ಪುಸ್ತಕದಲ್ಲಿ ಪ್ರಸ್ತುತ ಪಡಿಸಲಾದ ವಿಷಯಗಳಲ್ಲಿ ನಾನು ಅರಿವಿಲ್ಲದವನಾಗಿದ್ದೆನು. ಆತನು ಇದರ ಮೂಲಕವಾಗಿ ಕಲಿಯಲು ನನಗೆ ಸಹಾಯ ಮಾಡಿದನು. ಆದರೆ ಅಂತಹ ದಿನಗಳ ಅವಧಿಯಲ್ಲಿಯು, ಪವಿತ್ರವಾದ ದಿಟ್ಟತನವನ್ನು ದೇವರು ಅಲೌಕಿಕವಾಗಿ ಆಶೀರ್ವದಿಸುವುದನ್ನು ಮತ್ತು ಅದನ್ನು ತೋರ್ಪಡಿಸಲು ತೊಡಗಿಕೊಂಡಿದ್ದನ್ನು ಕೊಡಲೂ ನನಗೆ ಆನಂದವಿತ್ತು. ಅಂತಹ ಪ್ರಾರಂಭಿಕ ದಿವಸಗಳಿಂದ ಶಾಶ್ವತವಾದ ಫಲವು ಫಲಿತಾಂಶವಾಗಿತ್ತು. ನಾವು ಚರ್ಚಿಸುತ್ತಿರುವಂತಹ ಸತ್ಯಗಳ ಕುರಿತು ಅರ್ಥಮಾಡಿಕೊಂಡ ಮೇಲೆ, ದೇವರ ಸಮಯದ ಕುರಿತು ಕಲಿಯುವಂತದ್ದು ಒಂದು ಜವಬ್ದಾರಿಯಾಗಿ ಕಂಡು ಬರುತ್ತದೆ. ನಾವು ಮಾಡಬೇಕಾದಂತವುಗಳಲ್ಲಿ ಮಾಡಬೇಕಾದಂತವುಗಳಲ್ಲಿ ದೇವರು ನಮ್ಮನ್ನು ನೆಡೆಸುತ್ತಿರುವಾಗ, ನಮ್ಮ ವೈಯಕ್ತಿಕ ಜೀವಿತಗಳಿರಬಹುದು, ಸೇವೆ ಅಥವಾ ನಮ್ಮ ವೃತ್ತಿಗಳು, ಇರಬಹುದು ಆತನ ಸಮಯ ಮತ್ತು ಯೋಜನೆ ಎರಡನ್ನು ಸಹ ತಿಳಿಯಲು ಪ್ರಯತ್ನ ಮಾಡಬೇಕು. ದೇವರು ಸಿದ್ಧತೆ ಮತ್ತು ತರಬೇತಿಗೆ ಸಮಯ ಹೊಂದಿದ್ದಾನೆಂಬುದ್ನು ತಿಳಿಯಬೇಕು. ಆತನು ''ಯುದ್ಧನಿರತ ಜನರಿಗೆ'' ತರಬೇತಿಯನ್ನು ''ತಕ್ಕ ಸಮಯದಲ್ಲಿ'' ದೇವರು ಒದಗಿಸುತ್ತಾನೆ. ಭಯದ ನಿಮಿತ್ತವಾಗಿ ಅನೇಕ ಸಮಯಗಳಲ್ಲಿ ನಿರ್ದಿಷ್ಟ ಘಟನೆಗಳು, ಸ್ಥಳಗಳು ಮತ್ತು ಅನುಭವಗಳನ್ನು ಹುಡುಕುವುದನ್ನು ನಿಯಂತ್ರಿಸುತ್ತೇವೆ. ನಾವು ಹೇಗೆ ಪ್ರತಿಕ್ರಿಯೆ ತೋರಿಸಬೇಕೆಂಬುದಾಗಿ, ಭಯಪಡಬಹುದು ಇಲ್ಲವೇ ತಿಳಿಯದಿರುವಂತದಕ್ಕೆ ಸುಮ್ಮನೇ ಭಯಪಡಬಹುದು. ಆದರೆ ಕೆಲವು ಸಮಯಗಳಲ್ಲಿ, ಅಂತಹ ಪರಿಸ್ಥಿತಿಗಳಿಗೆ, ವಶಪಡಿಸಿಕೊಳ್ಳಲೂ, ಕಲಿಯಲು ಮತ್ತು ಪ್ರಕ್ರಿಯೆಯಲ್ಲಿ ಸಜ್ಜುಗೊಳ್ಳಲೂ ನಾವು ಹೋಗಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ಜೀವನದಲ್ಲಿ ಇಂತಹ ಪರಿಸ್ಥಿತಿಗಳು ಅನಗತ್ಯವಾದ ಅಥವಾ ಸುತ್ತುಮಾರ್ಗಗಳ ವಿಳಂಬಗಳಾಗಿ ಕಾಣಿಸಬಹುದು ಆದರೆ ನಮ್ಮ ಪ್ರಯೋಜನಕ್ಕಾಗಿ ದೇವರು ಅವುಗಳನ್ನು ತಿರುಗಿಸುತ್ತಾನೆ.

''ಹೇಸರುಗತ್ತೆಯಂತೆ ಇರುವವರಿಗೆ ಅನೇಕ ಆಶ್ಚರ್ಯಗಳು ಕಾಯುತ್ತಿರಬಹುದು. ಇಂತಹವರು ಹಳೇಯದು, ಗೊತ್ತಿರುವುದು ಮತ್ತು ಪರಿಚಿತವಿರುವಂತಹವುಗಳು

ಹೋದರೆ ಹೋಗಲಿ ಬಿಡು ಎಂಬುದಾಗಿ ಇಷ್ಟವಿಲ್ಲದವರು, ದೇವರ ನವೀನ ಚಲನೆಗಳಿಗೆ ಹೆಜ್ಜೆಯನ್ನಿಡಲು ಹಿಂಜರಿಯುವರಾಗಿರುವ ಜನರಾಗಿರುತ್ತಾರೆ. ಆಹ್ಲಾದಕರ ದೇವರ ಚಲನೆಗಳು ಹೊಸದಾದವು ಮತ್ತು ಪರಿಚಯವಿಲ್ಲದವುಗಳು ಮತ್ತು ಈಗ ದೇವರು ಮಾಡುತ್ತಿರುವವುಗಳಿಗೆ ಹೆಜ್ಜೆಯನ್ನಿಡುವುದಕ್ಕೆ ನಮ್ಮ ಕಡೇಯಿಂದ ಪ್ರೋತ್ಸಾಹ ಮತ್ತು ನಂಬಿಕೆಯನ್ನು ಅಪೇಕ್ಷಿಸುತ್ತದೆ.

ಇಂದು ಭೂಮಿಯ ಮೇಲೆ ದೇವರು ಮಾಡುತ್ತಿರುವವುಗಳ ಬಗ್ಗೆ ಅರಿವು ಹೊಂದಿರುವುದು ನಮಗೆ ಅಗತ್ಯವಿದೆ. ನಮಗೆ ಒಪ್ಪಿಸಿಕೊಟ್ಟಂತವರನ್ನು ದೇವರ ಸಮಯಕ್ಕನುಗುಣವಾಗಿ, ನಮಗಾಗಿ ಸಿದ್ಧಗೊಂಡಿರುವ ದಾರಿಗಳು ಮತ್ತು ಅಂತಹ ಕ್ಷೇತ್ರಗಳಿಗೆ ಮುನ್ನಡೆಸುವುದು ನಾಯಕತ್ವದಲ್ಲಿರುವಂತಹ ನಮ್ಮ ಜವಬ್ದಾರಿಯಾಗಿದೆ.

3

# ಸಮಯಗಳು ಮತ್ತು ಋತುಗಳನ್ನು ಅರ್ಥಮಾಡಿಕೊಳ್ಳುವದು

1 ಪೂರ್ವಕಾಲವೃತ್ತಾಂತ 12:32ಅ
**ಇಸ್ಸಾ ಕಾರ್ಯದಿಂದ ಇನ್ನೂರು ಮಂದಿ ಮುಖ್ಯಸ್ಥರು ಇವರು ಸಮಯೋಚಿತ ಜ್ಞಾನವುಳ್ಳವರಾಗಿ ಇಸ್ರಾಯೇಲ್ಯರು ಮಾಡತಕ್ಕದ್ದನ್ನು ಅರಿತವರು.**

ಮೇಲಿನ ವಚನವು ಒಂದು ನಿರ್ದಿಷ್ಟವಾದ ಜನರು ''ಸಮಯೋಚಿತ ಜ್ಞಾನವುಳ್ಳವರಾಗಿದ್ದರು'' ಎಂಬುದಾಗಿ ಹೇಳುತ್ತದೆ. ಅವರು ''ಕೈರೋಸ'' ಕಾಲಗಳನ್ನು ತಿಳಿದಿದ್ದರು ಅವರ ಸಮಯಕ್ಕೆ ಮಾಡತಕ್ಕದ್ದನ್ನು ಅರಿತಿದ್ದರು. ಸಮಯಗಳು ಮತ್ತು ಋತುಗಳನ್ನು ಅರಿತುಕೊಳ್ಳುವುದು ನಾವು ಮಾಡತಕ್ಕದ್ದನ್ನು ತಿಳಿಯಲು ಶಕ್ತರನ್ನಾಗಿಸುತ್ತದೆ. ನಮ್ಮ ವೈಯಕ್ತಿಕ ಜೀವಿತದಲ್ಲಿ ವಿಭಿನ್ನವಾದ ಘಟನೆಗಳಿವೆ ಅದಕ್ಕಾಗಿ ನಾವು ದೇವರ ಸಮಯವನ್ನು ಹುಡುಕಬೇಕು ಉದಾಹರಣೆಗೆ, ಒಂದು ಸೇವೆಯನ್ನು ಪ್ರಾರಂಭಿಸುವುದು ಮದುವೆ, ವೃತ್ತಿಯಲ್ಲಿ ಬದಲಾವಣೆ ಮಾಡುವುದು, ಸುವಾರ್ತೆಯ ನಿಮಿತ್ತದಿಂದ ಆಯಕಟ್ಟಿನ ಸ್ಥಳಾಂತರ ಅಥವಾ ಒಂದು ಹೊಸದಾದ ವ್ಯಾಪಾರ ಕ್ಷೇತ್ರಕ್ಕೆ ಪ್ರವೇಶಿಸುವುದು. ವಿಶೇಷವಾಗಿ ವಚನಗಳಲ್ಲಿ ಗುರುತಿಸಲಾದಂತಹ ಕೆಲವು ''ಋತುಗಳನ್ನು'' ನೋಡೋಣ.

## ನೂತನವಾದ ದೇವರ ಚಲನೆಗಳಿಗಾಗಿ ಒಂದು ಸಮಯ

ಭೂಮಿಯ ಮೇಲೆ ದೇವರ ಕಾರ್ಯಗಳು, ಚಲನೆಗಳು ಮತ್ತು ದೈವಸಂಕಲ್ಪಗಳು ಬಿಡುಗಡೆಗೊಳ್ಳಲೂ ಒಂದು ನಿರ್ದಿಷ್ಟವಾದ ಸಮಯವಿದೆ ಎಂಬುದಾಗಿ ನಾವು ಮೊದಲೇ ಪ್ರಾರಂಭಿಸಿದೆವು. ದೇವರು ಅವ್ಯವಸ್ಥೆಯ ವಿಧಾನದಲ್ಲಿ ಕಾರ್ಯ ಮಾಡುವುದಿಲ್ಲ. ಬದಲಿಗೆ ಆತನು ಭೂಮಿಯ ಮೇಲೆ ನೆರವೇರಿಸಬೇಕೆಂಬುದಾಗಿ ಆತನು ಬಯಸುವ ಒಂದು ಹೊಸ ಕಾರ್ಯವನ್ನು ಬಿಡುಗಡೆಗೊಳಿಸಲೂ ಮತ್ತು ಆತನು ಆರಂಭಿಸಲು ಪೂರ್ವ ನೇಮಿತ ಸಮಯವನ್ನು ಹೊಂದಿದ್ದಾನೆ. ಹಲವಾರು

ಸಂದರ್ಭಗಳಲ್ಲಿ ''ಸಮಯವು ಬರುತ್ತಿದೆ'' ಎಂಬ ನುಡಿಗಟ್ಟನ್ನು ಆತನು ಉಪಯೋಗಿಸುವಾಗ ಯೇಸುವು ಈ ಸಂಗತಿಯನ್ನು ಪ್ರಾಸಂಗೀಕವಾಗಿ ತಿಳಿಸಿದ್ದನು. ಯೇಸುವಿನ ಪ್ರಕಾರವಾಗಿ ದೇವರನ್ನು ಆತ್ಮದಲ್ಲಿಯು ಮತ್ತು ಸತ್ಯದಲ್ಲಿಯು ಜನರು ಆರಾಧಿಸುವ ಒಂದು ಸಮಯವು ಬರುತ್ತಿತ್ತು. (ಯೋಹಾನ 4:21,23) ಅಂತಹ ಗಳಿಗೆಯಲ್ಲಿ ನಾವು ವಾಸಿಸುತ್ತಿದ್ದೇವೆ. ಮುಂದೆ ದೇವರ ಮಗನ ಮಾನವರೂಪ ತಾಳುವ ಮೂಲಕವಾಗಿ ಸೈತಾನನ್ನು ಸೋಲಿಸಿ ಜಜ್ಜಲ್ಪಡುವುದು ಇತಿಹಾಸದಲ್ಲಿ ಒಂದು ನಿರ್ದಿಷ್ಟವಾದ ನೇಮಿತ ಸಮಯ ಹೊಂದಿತ್ತು. ಪೂರ್ವ ನಿಗದಿತ ಸಮಯವು ಬಂದಿತು ಎಂಬುದಾಗಿ ಯೇಸುವು ತಿಳಿದಾಗ ''ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ. ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು'' (ಯೋಹಾನ 12:31) ಯೋವೇಲ 2:28 ಮತ್ತು ಅಪೊಸ್ತಲರ ಕೃತ್ಯಗಳು 2:17 ರ ಎರಡು ವಚನದಲ್ಲಿ ಹೇಳಿದಂತಹ ದೇವರ ಆತ್ಮನ ದೊಡ್ಡ ಸುರಿಸುವಿಕೆಯ ಸಮಯದಲ್ಲಿ ನಾವು ಪ್ರಸ್ತುತದಲ್ಲಿ ಜೀವಿಸುತ್ತಿದ್ದೇವೆ. ''ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು''. ಎಲ್ಲಾ ಮನುಷ್ಯರ ಮೇಲೆ ದೇವರ ಆತ್ಮನ ಸುರಿಸುವಿಕೆಯು ಕಾಯ್ದಿರಿಸಲ್ಪಟ್ಟಿದೆ ಮತ್ತು ನಾವು ಜೀವಿಸುತ್ತಿರುವಂತಹ ದಿವಸಗಳಾದ – ''ಕಡೇ ದಿವಸಗಳು'' ಎಂಬುದಾಗಿ ದೇವರ ಕ್ಯಾಲೆಂಡರನಲ್ಲಿ ದೇವರು ಕಾರ್ಯನಿರ್ವಹಿಸುವ ಸಮಯದ ಅವಧಿಯನ್ನು ನಿರೂಪಿಸುತ್ತದೆ.

ಭೂಮಿಯ ಮೇಲೆ ದೇವರು ಕಾರ್ಯಗಳು ಮತ್ತು ಚಲನೆಗಳ ಕುರಿತು ನಾವು ತಿಳಿದುಕೊಳ್ಳಲೂ ಹಲವಾರು ಸಂಗತಿಗಳಿವೆ.

**ಯಾವುದೇ ಕೊಡಲ್ಪಟ್ಟ ಅವಧಿಯಲ್ಲಿ ಭೂಮಿಯ ಮೇಲೆ ಒಂದಕ್ಕಿಂತ ಹೆಚ್ಚು ಆತ್ಮನ ''ಚಲನೆ'' ಇರುತ್ತದೆ.**

ಉದಾಹರಣೆಗೆ ನಾವು ಜೀವಿಸುತ್ತಿರುವಂತಹ ಈ ಸಮಯವು ದೇವರನ್ನು ಆತ್ಮದಲ್ಲಿಯು ಮತ್ತು ಸತ್ಯದಲ್ಲಿಯು ಆರಾಧಿಸುವ ಒಂದು ಸಮಯವು ಮಾತ್ರವಲ್ಲದೇ ಆತ್ಮನ ಸುರಿಸುವಿಕೆಯನ್ನು ಪಡೆದುಕೊಳ್ಳುವ ಒಂದು ಸಮಯವಾಗಿದೆ. ಇದನ್ನು ನಾವು ತಿಳಿದಿರುವುದು ಅತ್ಯಗತ್ಯವಾದುದಾಗಿದೆ. ದೇವರು ಮಾಡುತ್ತಿರುವಂತಹ ಅನೇಕ ವಿವಿಧ ಕಾರ್ಯಗಳಲ್ಲಿ ಇದು ಸಹ ಒಂದಾಗಿದೆ ಎಂಬುದಾಗಿ ಅನೇಕ ಜನರು ಅವರ ಜೀವಿತದಲ್ಲಿ ದೇವರ ಕಾರ್ಯಗಳನ್ನು ತಾವೇ ಸೀಮಿತ ಪಡಿಸಿಕೊಂಡು ಇಂತಹ ಸತ್ಯಕ್ಕೆ ಅಜ್ಞಾನವುಳ್ಳವರಾಗಿದ್ದಾರೆ. ಆಮೇಲೆ ಅವರು ತಮ್ಮ ತಿಳುವಳಿಕೆಯ ಸೀಮಿತವನ್ನು ಮತ್ತು ಈ ಒಂದು ಕಾರ್ಯವನ್ನು ಮಾತ್ರವೇ ದೇವರು ಮಾಡುತ್ತಿದ್ದಾನೆಂಬುದಾಗಿರುವ

ದೃಷ್ಟಿಕೋನದಲ್ಲಿ ಪ್ರತಿಪಾದಿಸುತ್ತಾರೆ ಮತ್ತು ಇದು ಸ್ಪಷ್ಟವಾಗಿ ಸರಿಯಲ್ಲದ ನಿಲುವು ಆಗಿದೆ. ಕ್ರೈಸ್ತರಾಗಿ, ನಮ್ಮ ಜೀವಿತದ ಮೂಲಕವಾಗಿ ದೇವರು ನೆರವೇರಿಸಲೂ ಇಷ್ಟಪಡುವಂತಹ ಎಲ್ಲವುಗಳನ್ನು ಸರಿಹೊಂದಿಸಿಕೊಳ್ಳಬೇಕು ಮತ್ತು ಹೊಂದಾಣಿಕೆ ಮಾಡಿಕೊಳ್ಳಬೇಕು. ದೇವರು ಮಾಡುತ್ತಿರುವವುಗಳ ವಿವಿಧವಾದ ಕೆಲವು ರೂಪಗಳನ್ನು ಹೇಳುವುದಾದರೆ, – ನಾವು ''ವಾಕ್ಯದ ಚಳುವಳಿಯನ್ನು'' ನೋಡಿದ್ದೇವೆ ಅಲ್ಲಿ ನಂಬಿಕೆ, ದೈವಿಕ ಸ್ವಸ್ಥತೆ, ವಿಮೋಚನೆ, ಸಮೃದ್ಧಿ ಮುಂತಾದಂತಹ ವಿಷಯಾಂಶಗಳ ಮೇಲೆ ಅಧಿಕವಾದ ನಿರೂಪಣೆಯೊಡನೆ ದೇವರ ವಾಕ್ಯದ ಬೋಧನೆಯ ಮೇಲೆ ಒಂದು ಶ್ರೇಷ್ಟವಾದ ಮಹತ್ವವಿತ್ತು. ಆಮೇಲೆ ಪ್ರಪಂಚ ಸೇವಾಕಾರ್ಯಗಳು ಸಭೆ ಬೆಳವಣಿಗೆ, ಸ್ತೋತ್ರ ಮತ್ತು ಆರಾಧನೆ, ಕುಟುಂಬ ಸಾಮಾಜಿಕ  ರಾಜಕೀಯ ಕ್ರಿಯೆಗಳು ಆತ್ಮಿಕವಾದ ಹೋರಾಟ ಪ್ರವಾದನೆ ಮತ್ತು ಅಪೊಸ್ತಲತ್ವದ ಮೇಲೆ ಸಂಬಂಧಿತವಾಗಿ ನವೀನ ಚಲನೆಯೊಡನೆ ಒಂದು ಮಹತ್ವವಿತ್ತು. ದೇವರು ಮಾಡುತ್ತಿರುವಂತಹ ವಿಭಿನ್ನ ಕಾರ್ಯಗಳಿಗಾಗಿ ತೆರೆಯಲ್ಪಡಿ ಸಂಧಿಸಿರಿ, ಮತ್ತು ತಿಳಿದಿರುವುದಕ್ಕಿಂತ ಮೀರಿ ವಿಸ್ತರಿಸಲ್ಪಡಿರಿ ಮತ್ತು ಒಂದು ವಿಭಿನ್ನವಾದ ''ಭಾಷೆಯನ್ನು'' ಮಾತಾನಾಡುವ ಇನ್ನೊಬ್ಬನ ಕಡೆಗೆ ಸಹನೆಯಿಂದಿರುವವರಾಗಿರಿ. ಯಾಕೆಂದರೆ ದೇವರು ಮಾಡುತ್ತಿರುವಂತಹ ಒಂದು ವಿಭಿನ್ನವಾದ ಕಾರ್ಯದಲ್ಲಿ ನೀವು ತೊಡಗಿದವರಾಗಿರುತ್ತೀರಿ.

## ಪ್ರತಿಯೊಂದು ದೇವರ ಚಲನೆಯು ಒಂದು ನಿರ್ದಿಷ್ಟ ಉದ್ದೇಶವನ್ನು ನೆರವೇರಿಸುತ್ತದೆ.

ಪ್ರಸ್ತುತ ದಿನದ ಆತ್ಮನ ಸುರಿಸುವಿಕೆಯ ಉದ್ದೇಶಗಳು ಯೇಸುವಿನಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿವೆ, ಅದೇನೆಂರೆ ''ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು'' (ಅಪೊಸ್ತಲರ ಕೃತ್ಯಗಳು 1:8)

ನಮ್ಮನ್ನು ಪರೀಕ್ಷಿಸಿಕೊಳ್ಳಬೇಕು ಮತ್ತು ಆತನು ಮಾಡುತ್ತಿರುವವುಗಳನ್ನು ಏಕೆ ದೇವರು ಮಾಡುತ್ತಿದ್ದಾನೆಂಬ ತಿಳುವಳಿಕೆಗೆ ಬರಬೇಕು. ಇಲ್ಲದಿದ್ದರೆ ''ಉದ್ದೇಶವನ್ನು'' ಕಳೆದುಕೊಂಡಿರುವ ''ಬಗೆಗೆ'' ತೊಡಗಿಸಿಕೊಂಡಿರುವ ಸಾಧ್ಯತೆಯಿರುತ್ತದೆ. ದೇವರು ಅಂದುಕೊಳ್ಳುವ ಉದ್ದೇಶಗಳನ್ನು ನೆರವೇರಿಸುವಲ್ಲಿ ನಮ್ಮ ಪರಿಶ್ರಮಗಳ ಮೌಲ್ಯಮಾಪನಗೊಳಿಸಿಕೊಳ್ಳಲೂ ಇದು ಸಹಾಯ ಮಾಡುತ್ತದೆ.

## ಪ್ರತಿಯೊಂದು ದೇವರ ಚಲನೆಯು ಇನ್ನೊಂದು ದೇವರ ಚಲನೆಗೆ ಪೂರಕವಾಗಿರುತ್ತದೆ.

ದೇವರ ವಿಭಿನ್ನವಾದ ಚಲನೆಗಳು ಒಂದಕ್ಕೊಂದು ವಿರುದ್ಧವಾಗಿರುವುದಿಲ್ಲ ಆದರೆ ದೇವರು ಮಾಡುತ್ತಿರುವ ಪ್ರತಿಯೊಂದು ಇತರ ಕಾರ್ಯಗಳಿಗೆ ಸೇರಿಸಿಕೊಳ್ಳುತ್ತವೆ. ಉದಾಹರಣೆಗೆ ಪವಿತ್ರಾತ್ಮನ ಸುರಿಸುವಿಕೆಯು ನಾವು ಸಾಕ್ಷಿಗಳಾಗಿರುವಂತೆ ಮಾಡುವುದಲ್ಲದೇ ದೇವರನ್ನು ಆತ್ಮದಲ್ಲಿಯು ಮತ್ತು ಸತ್ಯದಲ್ಲಿಯು ಆರಾಧಿಸುವಂತೆ ಮಾಡುತ್ತದೆ. ಆತ್ಮದಲ್ಲಿ ದೇವರನ್ನು ಆರಾಧಿಸುವಂತದ್ದು ತಂದೆಯನ್ನು ಮೆಚ್ಚಿಸುವುದಲ್ಲದೇ ವೈರಿಗೆ ಎದುರಾಗಿರುವ ಒಂದು ಆಯುಧವಾಗಿರುತ್ತದೆ ಮತ್ತು ಸುವಾರ್ತೆಯು ಎಲ್ಲೆಗಳನ್ನು ಮೀರಿ ಮುಂದುವರಿಕೆಯಾಗಲೂ ಸಹಾಯ ಮಾಡುತ್ತದೆ. ಆದ್ದರಿಂದ ವಿಭಿನ್ನವಾದ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವವರೊಂದಿಗೆ ಸಹಾಯಕರಾಗಿರಿ ಮತ್ತು ಕಲಿಯಿರಿ ಆದ್ದರಿಂದ ನಿಮ್ಮ ಜೀವಿತವು ಪುಷ್ಟಿಕರಿಸಲ್ಪಡುತ್ತದೆ.

## ದೇವರ ಒಂದು ಹಿಂದಿನ ಕೆಲಸದಲ್ಲಿ ಮುಂದುವರಿಯುವಾಗ ಜನರು ತಪ್ಪು ಮಾಡುವ ಸಾಧ್ಯತೆಯಿರುತ್ತದೆ.

ಹಿಂದಿನ ದೇವರ ಚಲನೆಯನ್ನು ತಿಳಿಯುವುದು ಪ್ರಾಮುಖ್ಯವಾಗಿದೆ. ನಾವು ಹಿಂದಿನದರಲ್ಲಿ ಜೀವಿಸಲು ನಾವೇ ಅವಕಾಶ ನೀಡಲೂ ಸಾಧ್ಯವಿಲ್ಲ. ವಾಗ್ದಾನದ ದೇಶಕ್ಕೆ ಪ್ರಯಾಣಿಸಿದ ಇಸ್ರಾಯೇಲ್ಯರ ಉದಾಹರಣೆಯನ್ನು ಯೋಚಿಸಿರಿ. ಅನೇಕ ಸಂದರ್ಭದಲ್ಲಿ ಅವರು ನಿರುತ್ಸಾಹಗೊಂಡಿದ್ದರು. ದೇವರು ಮತ್ತು ಮೋಶೆಗೆ ವಿರುದ್ಧವಾಗಿ ಗೊಣಗುಟ್ಟಿದರು ಮತ್ತು ದೂರು ಹೇಳಿದರು. ಅಂತಹ ಒಂದು ಸಂದರ್ಭದಲ್ಲಿ, ಅನೇಕ ಜನರನ್ನು ಕೊಲ್ಲಲೂ ಅವರ ಡೇರೆಗಳಿಗೆ ಪ್ರವೇಶಿಸಲು ಉರಿಯುವ ಸರ್ಪಗಳನ್ನು ಕರ್ತನು ಅನುಮತಿಸಿದನು. ಜನರು ಪಶ್ಚಾತ್ತಾಪ ಪಟ್ಟಾಗ ಮೋಶೆಗೆ ಒಂದು ತಾಮ್ರದ ಸರ್ಪವನ್ನು ಮಾಡಿ ಅದನ್ನು ಒಂದು ಧ್ವಜಸ್ತಂಭದ ಮೇಲೆ ಎತ್ತಿ ನಿಲ್ಲಿಸಬೇಕು ಎಂದು ಉಪದೇಶಿಸಿದನು ಆದ್ದರಿಂದ ''ಸರ್ಪಗಳಿಂದ ಗಾಯಪಟ್ಟವರು ಅದನ್ನು ನೋಡಿ ಬದುಕಿಕೊಳ್ಳುವರು ಎಂದು ಆಜ್ಞಾಪಿಸಿದನು'' (ಅರಣ್ಯಕಾಂಡ 21:1–9) ಆದ್ದರಿಂದ ಅದು ಜರುಗಿತ್ತು. ಇತಿಹಾಸದಲ್ಲಿ ಕೆಲವು ನೂರು ವರುಷಗಳ ಜೊತೆಗೆ ಚಲಿಸಿದರೆ, ಮೋಶೆಯು ಮಾಡಿದಂತಹ ತಾಮ್ರದ ಸರ್ಪಕ್ಕೆ ಅದು ಒಂದು ಆರಾಧನೆಯ ವಸ್ತುವಾಗಿ ಉಪಯೋಗಿಸಿ ಧೂಪದ್ರವ್ಯವನ್ನು ಇಸ್ರಾಯೇಲ್ಯರು ಸುಟ್ಟಿದ್ದನ್ನು ನಾವು ನೋಡುತ್ತೇವೆ. (2 ಅರಸುಗಳು 18:4) ದೇವ ಜನರ ಮಧ್ಯದಲ್ಲಿದ್ದ ಈ ಮರಣಾಂತಿಕ ದುಷ್ಟನನ್ನು ನಾಶಪಡಿಸಲು ದೇವರ ಅರಸನಾದ ಹಿಜ್ಕೀಯನನ್ನು

ಎಬ್ಬಿಸಿದನು. ನಮ್ಮಲ್ಲಿ ಹಲವರು ದೇವರ ಹಿಂದಿನ ಚಲನೆಯ ಅವಶೇಷಗಳಿಗೆ ವಿಗ್ರಹಾರಾಧನೆ ರೀತಿಯಲ್ಲಿ ಭದ್ರವಾಗಿ ಗಟ್ಟಿಯಾಗಿ ಹಿಡಿದುಕೊಂಡಿರುವುದನ್ನು ಇಂದು ನೋಡುತ್ತೇವೆ. ಇದು ದೈವ ಸಂಕಲ್ಪದ ಮೋಸಗಳಿಗೂ ಮತ್ತು ತಪ್ಪುಗಳಿಗೂ ನಡೆಸುತ್ತದೆ.

## ದೇವರು ಮಾಡುತ್ತಿರುವಂತಹ ಹೊಸ ಕಾರ್ಯಕ್ಕೆ ಹೆಜ್ಜೆಯನ್ನಿಡಲು ಇಷ್ಟವಿಲ್ಲದಿರುವುದು ದುಬಾರಿಯಾಗಬಹುದು

ಅನೇಕ ಸಮಯಗಳಲ್ಲಿ, ನಾವು ಕೆಲವು ನಿರ್ದಿಷ್ಟ ''ಮಾರ್ಗಕ್ಕೆ'' ಹೊಂದಿಕೊಂಡವರಾಗಿ, ದೇವರ ಕಾರ್ಯ ಮತ್ತು ಆತನ ಪ್ರಸನ್ನತೆಯ ತೋರ್ಪಡಿಸುವಿಕೆಯನ್ನು ನಾವು ನೋಡಿದವರಾಗಿ, ಆ ರೀತಿಯಾಗಿ ದೇವರು ಕಾರ್ಯ ಮಾಡಿದಂತಹ ನಿರ್ದಿಷ್ಟವಾದ ಮಾರ್ಗವನ್ನೇ ಹಿಡಿದಿಟ್ಟುಕೊಳ್ಳಲೂ ನಾವು ಪ್ರಾರಂಭಿಸುತ್ತೇವೆ. ಪ್ರಸ್ತುತದಲ್ಲಿ ದೇವರು ಕಾರ್ಯ ನಿರ್ವಹಿಸಲೂ ಬಯಸುವಂತಹ ಹೊಸ ಮಾರ್ಗಗಳಿಗೆ ನಾವು ತೆರೆದವರಾಗಿರಲು ಸೋತು ಹೋಗುತ್ತೇವೆ. ಶ್ರೇಷ್ಟ ಹಳೇ ಒಡಂಬಡಿಕೆ ನಾಯಕನಾದ ಮೋಶೆಯನ್ನು ಪರಿಗಣಿಸಿರಿ. ದೇವರು ಮೋಶೆಗೆ ಬಂಡೆಗೆ ಹೊಡಿ ಎಂಬುದಾಗಿ ಆಜ್ಞಾಪಿಸಿದಾಗ ಅವನು ಅದನ್ನೇ ಮಾಡಿದನು ಮತ್ತು ಬಾಯರಿದಂತಹ ಇಸ್ರಾಯೇಲ್ಯರ ದಾಹವನ್ನು ತಣಿಸಲೂ ನೀರು ಅದರೊಳಗಿಂದ ಹರಿಯಿತು (ವಿಮೋಚನ ಕಾಂಡ 17:1-7) ಆ ಮೇಲೆ ಕೆಲವು ವರ್ಷಗಳ ನಂತರ, ಮೋಶೆಯು ಜನರಿಗೆ ನೀರಿನ ಅಗತ್ಯತೆಯಲ್ಲಿರುವಾಗ ಅದೇ ರೀತಿಯ ಪರಿಸ್ಥಿತಿಯನ್ನು ಎದುರಿಸಿದನು. ಆದಾಗ್ಯೂ ಈ ಸಮಯದಲ್ಲಿ ದೇವರು ಮೋಶೆಗೆ ತನ್ನ ಕೋಲಿನಿಂದ ಬಂಡೆಗೆ ಹೊಡೆಯುವುದರ ಬದಲಿಗೆ ಬಂಡೆಗೆ ಮಾತಾನಾಡು ಎಂಬುದಾಗಿ ದೇವರು ಆಜ್ಞಾಪಿಸಿದನು. ಮೋಶೆಯು ತುಂಬಾ ಕೋಪಗೊಂಡು ದೂರು ಹೇಳುವ ಇಸ್ರಾಯೇಲ್ಯರೊಡನೆ ಹೋಗಿ ಬಂಡೆಗೆ ಆಜ್ಞಾಪಿಸುವ ಬದಲೂ ಕೋಲಿನಿಂದ ಹೊಡೆದನು (ಅರಣ್ಯಕಾಂಡ 20:1-13) ಖಂಡಿತವಾಗಿಯು ನೀರು ಪ್ರವಾಹವಾಗಿ ಹೊರಟಿತು, ಆದರೆ ಮೋಶೆಯ ಅಪನಂಬಿಕೆ ಮತ್ತು ಅವಿಧೇಯತೆಯ ಲೆಕ್ಕವನ್ನು ದೇವರು ಹಿಡಿದಿಟ್ಟುಕೊಳ್ಳಬೇಕಾಯಿತು. ಅವನು ಬಂಡೆಗೆ ನುಡಿಯಲು ಹಿತಕರವುಳ್ಳವನಾಗಿರಲಿಲ್ಲ ಬಹುಶಃ ಆ ಅದ್ಭುತಗಳ ಹಿಂದಿರುವುದು ಅವನ ಕೋಲಲ್ಲ ದೇವರು ಎಂಬುದನ್ನು ಅವನು ಮರೆತುಬಿಟ್ಟಿದ್ದನು. ಮೋಶೆಯು ಅವನ ಅಪನಂಬಿಕೆಗಾಗಿ ತೀವ್ರವಾದ ಪ್ರಾಯಶ್ಚಿತಗಳನ್ನು ಎದುರಿಸಬೇಕಾಯಿತು ಅಂತಿಮವಾದ ಫಲಿತಾಂಶವು ಅದೇ ಆಗಿದ್ದಾಗಲೂ ದೇವರು ನಮ್ಮಲ್ಲಿ ಕಾರ್ಯ ಮಾಡಲೂ ಬಯಸುವ ಹೊಸ ಮಾರ್ಗಗಳಿಗೆ ನಾವು ತೆರೆದವರಾಗಿದ್ದೇವಾ?

## ಒಂದು ದರ್ಶನದ ನೆರವೇರಿಕೆಗೆ ಒಂದು ಸಮಯವಿದೆ.

ಹಬಕ್ಕೂಕ 2:2,3

**ಆಗ ಯೆಹೋವನು ನನಗೆ ಈ ಉತ್ತರವನ್ನು ದಯಪಾಲಿಸಿದನು ನಿನಗಾದ ದರ್ಶನವನ್ನು ಬರೆ ಓದುವವರ ಶೀಘ್ರವಾಗಿ ಓದುವಂತೆ ಹಲಿಗೆಗಳ ಮೇಲೆ ಅದನ್ನು ಕಿತ್ತು ಅದು ಕ್ಲುಪ್ತಕಾಲದಲ್ಲಿ ನೆರವೇರತಕ್ಕದ್ದು ಆದರೆ ಪರಿಣಾಮಕ್ಕೆ ತ್ವರೆಪಡುತ್ತದೆ. ಮೋಸ ಮಾಡದು ತಡವಾದರೂ ಅದಕ್ಕೆ ಕಾದಿರು ಅದು ಬಂದೇ ಬರುವದು, ತಾಮಸವಾಗದು**

ನಿಮ್ಮ ಹೃದಯ ಮತ್ತು ಜೀವಿತದಲ್ಲಿ ದೇವರು ನುಡಿದ ಎಲ್ಲಾ ಮಾತುಗಳು ಅದರ ಫಲಪ್ರದಕ್ಕೆ ನೇಮಿತವಾದ ಸಮಯವಿದೆ. ಒಬ್ಬ ಸ್ತ್ರೀಯು ಒಂದು ಮಗುವಿಗೆ ಜನ್ಮ ಕೊಡುವಂತಹ ರೀತಿಯಾಗಿಯೇ ಪ್ರಕ್ರಿಯೆ ಇರುತ್ತದೆ. ನಿಮ್ಮ ಹೃದಯಗಳಿಗೆ ಆತನ ಯೋಜನೆ, ಆತನ ಕಾರ್ಯವೈಖರಿ, ಆತನ ವಿಚಾರ ಆತನ ಕನಸುಗಳನ್ನು ದೇವರು ಇರಿಸುವಂತಹ ಕಲ್ಪನಾ ಉದಾಹರಣೆಗಳಿವೆ ಆಮೇಲೆ ಸಮಯವು ಬೆಳೆವಣಿಗೆ ಹೊಂದುತ್ತದೆ. ವೈಯಕ್ತಿಕವಾಗಿ ನೀವು ಎಲ್ಲದ್ದೀರಾ ಮತ್ತು ಇತರೆ ಅವಶ್ಯಕ ಘಟನೆಗಳು ಯೋಜನೆಗೆ ಸೇರಿಕೊಂಡು ಸಮಾನಾಂತರಗೊಳ್ಳುತ್ತವೆ. ಅಂತಿಮವಾಗಿ ಜನ್ಮ ಕೊಡುವ ಸಮಯ ಬರುತ್ತದೆ. – ದರ್ಶನವು ಒಂದು ವಾಸ್ತವವಾಗುತ್ತದೆ. ಆದರೆ ದರ್ಶನವು ಕೊಡಲ್ಪಟ್ಟಂತಹ ಸಮಯದಿಂದ ಅದು ನಿಜಸ್ಥಿತಿಗೆ ಬರಲು ಹಾದು ಹೋಗುವ ಒಂದು ಸಮಯ ಕಾದುಕೊಂಡಿರುವ ಸಮಯವಿದೆ ಎಂಬುದನ್ನು ನಾವು ತಿಳಿಯಬೇಕು. ದರ್ಶನಗಳು ನೆರವೇರುವುದಕ್ಕಾಗಿ ಈ ಅವಧಿಯಲ್ಲಿ ಸಮಯದಲ್ಲಿ ಅಡಿಪಾಯ ಹಾಕಲು ನಮ್ಮನ್ನು ದೇವರು ಶಕ್ತಗೊಳಿಸುತ್ತಾನೆ. ದರ್ಶನವು ನೆರವೇರುತ್ತದೆ. ಎಂಬ ಭರವಸೆಯುಳ್ಳವರಾಗಿ ನಮ್ಮ ತಕ್ಷಣದ ಕಾರ್ಯದ ಕುರಿತು ನಾವು ಪರಿಶ್ರಮವುಳ್ಳವರಾಗಿರಬೇಕು. ಈ ಕಾದುಕೊಂಡಿರುವ ಅವಧಿಯಲ್ಲಿ, ದರ್ಶನವನ್ನು ನೆರವೇರಿಸಲೂ ಅಗತ್ಯವಿರುವಂತಹ ಜನರು ಸ್ಥಳಗಳು, ಸಂಗತಿಗಳನ್ನು ಒಟ್ಟಾಗಿ ಸೇರಿಸುವಲ್ಲಿ ನಾವು ಶಕ್ತಗೊಳ್ಳುವಂತೆ ದೇವರು ಸಹಾಯ ಮಾಡುತ್ತಾನೆ. ನಾವು ಸಿದ್ಧಗೊಂಡಿರುವಾಗ ಮತ್ತು ವಿಷಯಗಳು ಜೋಡಣೆಯಾಗಿರುವಾಗ, ದರ್ಶನದ ನೆರವೇರಿಕೆಯ ಸಮಯವಾದಂತಹ ''ಕೈರೋಸ್' ಗಳಿಗೆಯು ಬರುತ್ತದೆ.

## ಫಲವನ್ನು ಆನಂದಿಸಲೂ ಒಂದು ಸಮಯವಿದೆ

ಕೀರ್ತನೆಗಳು 1:3ಅ

**ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ**

ಹಣ್ಣು ಅದರ ಸಮಯದಲ್ಲಿ ಫಲಬಿಡುತ್ತದೆ. ನಮ್ಮ ದುಡಿಮೆಯ ಫಲವನ್ನು ನಾವು ನೋಡಬಹುದು ಮತ್ತು ಆನಂದಿಸಲೂ ಒಂದು ಸಮಯವಿದೆ ಎಂಬುದಾಗಿ ಇದು ಸೂಚಿಸುತ್ತದೆ. ನಮ್ಮಲ್ಲಿ ಕೆಲವರು ಕರ್ತನು ಕರೆದದ್ದನ್ನು ಮಾಡಲೂ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಬಹಳ ಪರಿಶ್ರಮದಿಂದ ದುಡಿಯುತ್ತಿರಬಹುದು. ತುಂಬಾ ಆಗಾಗ್ಗೆ ತಕ್ಷಣವಾಗಿ ಫಲವನ್ನು ನೋಡದಿದ್ದರೆ ಅಥವಾ ಆ ಒಂದು ವಿಚಾರಕ್ಕಾಗಿ ಅಂದು ಕೊಂಡ ಸಮಯದಲ್ಲಿ ಫಲವನ್ನು ನಾವು ನೋಡದಿದ್ದಾಗ, ನಾವು ನಿರುತ್ಸಾಹಗೊಳ್ಳುತ್ತೇವೆ. ಕಾಲವಲ್ಲದ ಸಮಯದಲ್ಲಿ ಹಣ್ಣನ್ನು ಎದುರು ನೋಡುವುದು ನಿರುತ್ಸಾಹಗೊಳಿಸುತ್ತದೆ ಹಣ್ಣು ಅದರ ಋತುವಿನಲ್ಲಿ ಫಲ ಬಿಡುತ್ತದೆಂಬುದನ್ನು ತಿಳಿದುಕೊಳ್ಳಬೇಕು. ನಮ್ಮ ದುಡಿಮೆಯು ಬುಗ್ಗೆಯಾಗಿ ಹೊರಬರಲೂ, ಹೂವಾಗಿ ಅರಳಲು ಮತ್ತು ಫಲಕೊಡುವ ಫಲಿತಾಂಶಕ್ಕೆ ನೇಮಿತವಾದ ಒಂದು ಸಮಯ ಇದೆ. ಆತನ ಸಮಯದಲ್ಲಿ ಹೆಚ್ಚಳವನ್ನು ಕೊಡುವಂತಹ ಕರ್ತನನ್ನು ಸುಗ್ಗಿಗಾಗಿ ಎದುರು ನೋಡುವವರಾಗಿರೋಣ.

## ಪರೀಕ್ಷಿಸಲು ಮತ್ತು ಶೋಧನೆಯ ಒಂದು ಸಮಯ

ಲೂಕ 4:13

**ಸೈತಾನನು ಸಕಲ ವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪ ಕಾಲ ಆತನನ್ನು ಬಿಟ್ಟು ಹೊರಟು ಹೋದನು.**

**ಎಫೆಸದವರಿಗೆ 6:13**

**ಆದದರಿಂದ ಕಠಿಣ ಯುದ್ಧವು ನಡೆಯುವ ದಿವನಸದಲ್ಲಿ ಅ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ**

ಒಬ್ಬ ವಿಶ್ವಾಸಿಯ ಮೇಲೆ ದುರಾತ್ಮನು ಬೆಂಬೀಳಿಸುವ ಅವನ ತೀವ್ರ ದಾಳಿಯ ''ತಕ್ಕ ಸಮಯವನ್ನು'' ದುರಾತ್ಮನು ನೋಡುವಂತಹ ಸಮಯಗಳು ಮತ್ತು ಋತುಗಳಿವೆ. ದುರಾತ್ಮನು ತಕ್ಕ ಸಮಯಗಳಲ್ಲಿ ಆಕ್ರಮಣ ಮಾಡುತ್ತಾನೆ. ಅಂತಹ ಸಮಯಗಳು ಎಫೆಸದವರಿಗೆ ಪತ್ರಿಕೆಯಲ್ಲಿ ''ದುರಾತ್ಮನ ದಿನ'' ಎಂಬುದಾಗಿ ಉಲ್ಲೇಖಿಸಲಾಗಿದೆ. ಕೆಲವು ಕಾರಣಗಳಿಗಾಗಿ ನಾವು ಹಾಗೆಯೇ ಅತ್ಯಂತ ದುರ್ಬಲರಾಗಿ, ಅಥವಾ ವೈರಿಗೆ ಬಾಗಿಲನ್ನು ತೆರೆದು ಬಿಟ್ಟಂತಹ ಕೆಲವು ಸಮಯಗಳಿವೆ. ಈ ಸಮಯವನ್ನು ''ಶೋಧನೆಯ ಸಮಯ'' (ಲೂಕ 8:13) ಎಂಬುದಾಗಿ ಯೇಸುವು ಉಲ್ಲೇಖಿಸಿದ್ದಾನೆ. ಆದದರಿಂದ ನಾವು ''ಸ್ವಸ್ಥಚಿತ್ತರಾಗಿರಬೇಕು, ಎಚ್ಚರವಾಗಿರಬೇಕು'' (1 ಪೇತ್ರನು 5:8) ಜಾಗರೂಕರಾಗಿರಬೇಕು. ನಮಗೆ ವಿರುದ್ಧವಾಗಿ ದುರಾತ್ಮನು ಆಕ್ರಮಣ

ಮಾಡುವ ನಿದಿಷ್ಟವಾದ ಸಮಯಗಳು ಮತ್ತು ಋತುಗಳು ಇವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ನಮಗೆ ಪ್ರಾಮುಖ್ಯವಾದದಾಗಿದೆ. ಯುದ್ಧವು ಅತ್ಯಂತ ಕಠಿಣವಾಗಿರುವಂತಹ ಕೆಲವು ಸಮಯಗಳಿವೆ ಮತ್ತು ಇತರೆ ಸಂದರ್ಭಗಳಲ್ಲಿ ಶ್ರಮದಾಯಕವಾಗಿರುತ್ತದೆ. ಸಾಮಾನ್ಯವಾಗಿ ಅಂತಹ ತೀವ್ರವಾದ ಸೈತಾನ ಆಕ್ರಮಣಗಳು ನಮ್ಮ ಜೀವಿತದಲ್ಲಿ ಬೃಹತ್ ವಿಜಯ ಮತ್ತು ಮಹತ್ವದ ತಿರುವುಗಳ ಅಂಚಿನಲ್ಲಿ ಇದ್ದೇವೆಂಬುದಕ್ಕೆ ನಿಶ್ಚಯಾರ್ಥಕವಾಗಿದೆ. ಹಾಗೆಯೇ ಇತರ ವಿಶ್ವಾಸಿಗಳು ಹಾದು ಹೋಗುತ್ತಿರುವಂತಹ ಋತುಗಳಿಗೆ ಸೂಕ್ಷ್ಮತೆಯುಳ್ಳವರಾಗಿರುವುದು ಅವರೊಂದಿಗೆ ನಿಂತುಕೊಳ್ಳಲು ಮತ್ತು ಅಂತಹ ಒಂದು ಸಮಯದಲ್ಲಿ ಅವರಿಗೆ ಬೆಂಬಲವಾಗಿರಲೂ ನಮ್ಮ ನ್ನು ಶಕ್ತರನ್ನಾಗಿಸುತ್ತದೆ. ''ತೊಂದರೆಯ ಸಮಯದಲ್ಲಿ'' (ಕೀರ್ತನೆಗಳು 41:1) ಮತ್ತು ''ದುಷ್ಟ ಸಮಯದಲ್ಲಿ'' (ಕೀರ್ತನೆಗಳು 37:18,19) ಆತನ ಸಹಾಯವನ್ನು ದೇವರು ವಾಗ್ದಾನ ಮಾಡಿದ್ದಾನೆ.

## ಸುಗ್ಗಿಗಾಗಿ ಒಂದು ಸಮಯ

ಅಪೊಸ್ತಲರ ಕೃತ್ಯಗಳು 16:6,7

**ಆಸ್ಯಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪವಿತ್ರಾತ್ಮನು ತಡೆದದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆಯನ್ನು ಹಾದು ಹೋಗಿ ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೂನ್ಯಕ್ಕೆ ಹೋಗುವ ಪ್ರಯತ್ನ ಮಾಡಿದರು. ಅಲ್ಲಿಯೂ ಯೇಸುವಿನ ಆತ್ಮನು ಅವರನ್ನು ಹೋಗಗೊಡಿಸಲಿಲ್ಲ**

ನಮ್ಮ ದೇವರು ಸುಗ್ಗಿಯ ಕರ್ತನಾಗಿದ್ದಾನೆ. ದೇಶಗಳು ಆತನ ಸುಗ್ಗೀಯ ಹೊಲಗಳಾಗಿವೆ. ಆತನ ಸುಗ್ಗೀಯ ಹೊಲಗಳು ಪ್ರತಿಯೊಂದು ಯಾವಾಗ ಹಣ್ಣಾಗಬೇಕು. ಏಕೆಂದರೆ ಅವೆಲ್ಲವೂ ಏಕಕಾಲದಲ್ಲಿ ಹಣ್ಣಾಗುವುದಿಲ್ಲ ಎಂಬುದು ಆತನಿಗೆ ಗೊತ್ತು. ಸುವಾರ್ತೆಯನ್ನು ಸಾರುವ ಉದ್ದೇಶಕ್ಕಾಗಿ ಪೌಲನು ಮತ್ತು ಅವನ ಜೊತೆ ಕೆಲಸದವರು ನಿರ್ದಿಷ್ಟವಾದ ಪ್ರದೇಶಗಳನ್ನು ಪ್ರವೇಶಿಸಲು ಪ್ರಯತ್ನಿಸಿದ್ದು ಆದರೆ ಪವಿತ್ರಾತ್ಮನು ಅವರು ಹೋಗಲೂ ಅನುಮತಿ ಕೊಡದಿದ್ದದು ನಮಗೆ ಗೊತ್ತಿದೆ. ನಿದಿಷ್ಟವಾದ ಪ್ರದೇಶಗಳು ಸುವಾರ್ತೆಗೆ ಇನ್ನೂ ಸಿದ್ಧವಾಗಿಲ್ಲ ಎಂಬುದಕ್ಕೆ ಹಲವಾರು ಕಾರಣಗಳಿವೆ. ಬಹುಶಃ ವಾಕ್ಯವನ್ನು ಪಡೆದುಕೊಳ್ಳಲೂ ಜನರು ಸಿದ್ಧವಾಗಿಲ್ಲ ಮತ್ತು ಕೆಲಸ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆಯ ಮೂಲಕ ಮಾಡಬೇಕಾಗಿದೆ. ಬಹುಶಃ ಆ ಒಂದು ಪ್ರದೇಶದ ಕಾರ್ಯಗಳ ಸವಾಲುಗಳನ್ನು ಸಂಧಿಸಲು, ಕೆಲಸಗಾರರು ತರಭೇತುಗೊಂಡಿರುವುದಿಲ್ಲ ಅಥವಾ ಬಹುಶಃ ನಂತರದ ಸಮಯದಲ್ಲಿ ಹೆಜ್ಜೆಯನ್ನಿಡುವುದು ಒಂದು ದೊಡ್ಡ ಸುಗ್ಗಿಯನ್ನು ಸುಮ್ಮನೆ ತರುತ್ತದೆ. ಯಾವುದೇ ಪರಿಸ್ಥಿತಿಯಿರಬಹುದು ದೇವರ ಸುಗ್ಗೀಯ ಹೊಲಗಳಲ್ಲಿ ಹೆಜ್ಜೆಯನ್ನಿಡಲು

ಸೂಕ್ಷ್ಮತೆಯುಳ್ಳವರಾಗಿರುವುದು ಪವಿತ್ರಾತ್ಮನ ನಡೆಸುವಿಕೆಯನ್ನು ಅನುಸರಿಸುವುದು, ಆತನೊಂದಿಗೆ ಹಂತಹಂತವಾಗಿ ಸಮಯಕ್ಕೆ ಸರಿಯಾಗಿ ನಡೆಯುವುದನ್ನು ನಾವು ತಿಳಿಯಬೇಕು.

## ದೇವರ ಮನೆಯನ್ನು ಕಟ್ಟುವ ಒಂದು ಸಮಯ

ಹಗ್ಗಾಯ 1:1–4
**ಅರಸನಾದ ದಾರ್ಯವೆಷನ ಆಳ್ವಿಕೆಯ ಎರಡನೆಯ ವರುಷದ ಆರನೆಯ ತಿಂಗಳಿನ ಮೊದಲನೆಯ ದಿನದಲ್ಲಿ ಯೆಹೋವನು ಈ ವಾಕ್ಯವನ್ನು ಶೆಯಲ್ತೀಯೇಲನಿಗೆ ಹುಟ್ಟಿದ ಯೆಹೂದ ದೇಶಾಧಿಪತಿಯಾದ ಜೆರುಬ್ಬಾಬೆಲನಿಗೂ ಯೆಹೋಚಾದಾಕನಿಗೆ ಜನಿಸಿದ ಮಹಾಯಾಜಕನಾದ ಯೆಹೋಶುವನಿಗೂ ಪ್ರವಾದಿಯಾದ ಹಗ್ಗಾಯನ ಮೂಲಕ ಹೇಳಿಕಳುಹಿಸಿದನು. ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ. ಯೆಹೋವನ ಆಲಯವನ್ನು ಕಟ್ಟುವದಕ್ಕೆ ಸಮಯವು ಇನ್ನೂ ಬಂದಿಲ್ಲ ಎಂದು ಈ ಜನರು ಅಂದುಕೊಳ್ಳುತ್ತಾರಲ್ಲಾ ಯೆಹೋವನು ಪ್ರವಾದಿಯಾದ ಹಗ್ಗಾಯನ ಮೂಲಕ ಈ ವಾಕ್ಯವನ್ನು ಹೇಳಿಸಿದನು. ಈ ಆಲಯವು ಹಾಳು ಬಿದ್ದಿದೆಯಲ್ಲಾ ನೀವು ಒಳಗೋಡೆಗೆಲ್ಲಾ ಹಲಿಗೆ ಹೊದಿಸಿಕೊಂಡ ಸ್ವಂತ ಮನೆಗಳಲ್ಲಿ ವಾಸಿಸುವದಕ್ಕೆ ಈ ಸಮಯವು ತಕ್ಕದ್ದೋ?**

ಹಗ್ಗಾಯ 1:8
**ಮಲೆನಾಡಿಗೆ ಹೋಗಿ ಮರವನ್ನು ತಂದು ನನ್ನ ಆಲಯವನ್ನು ಕಟ್ಟಿರಿ ನಾನು ಅದಕ್ಕೆ ಮೆಚ್ಚಿ ನನ್ನ ಪ್ರಭಾವವನ್ನು ಅಲ್ಲಿ ಪ್ರಕಾಶಗೊಳಿಸುವೆನು. ಇದು ಯೆಹೋವನ ನುಡಿ**

ಹಳೇ ಒಡಂಬಡಿಕೆಯಲ್ಲಿ ದೇವರ ಜನರು ದೇವರ ಸಮಯವನ್ನು ತಪ್ಪಿಸಿಕೊಂಡಿದ್ದರು ಮತ್ತು ಸೂಕ್ತವಲ್ಲದ ಕಾರ್ಯಗಳನ್ನು ಮಾಡುವುದರಲ್ಲಿ ತಪ್ಪಿತಸ್ಥರಾಗಿದ್ದರು ದೇವಾಲಯವನ್ನು ಪುನಃ ಕಟ್ಟುವುದನ್ನು ತಿರಸ್ಕರಿಸಿದರು.

ಅವರ ಸ್ವಂತ ಮನೆಗಳನ್ನು ಕಟ್ಟಿಕೊಳ್ಳಲು ತಾವೇ ಮಗ್ನರಾಗಿದ್ದರು ನಮ್ಮ ದಿವಸದಲ್ಲಿ ದೇವರು ಕಟ್ಟುತ್ತಿರುವಂತಹ ಆಲಯವು ''ಇಟ್ಟಿಗೆ ಮತ್ತು ಗಾರೆಯಿಂದ'' ಕಟ್ಟಲ್ಪಡದೆ ''ಜೀವವುಳ್ಳ ಕಲ್ಲುಗಳೊಡನೆ'' ಕಟ್ಟಲ್ಪಟ್ಟಿದೆ ಎಂಬ ಒಂದು ಸಮಾನಾಂತರ ಚಿತ್ರಣ ನೀಡುತ್ತದೆಂಬುದು ನಮಗೆ ಗೊತ್ತಿದೆ. ಯೇಸುವು ತಾನೇ ಕಟ್ಟುತ್ತೇನೆಂಬುದಾಗಿ ಹೇಳಿದಂತಹ ಸಭೆಯು ಇದಾಗಿದೆ ಮತ್ತು ಸಂತರು (ವಿಶ್ವಾಸಿಗಳು) ಎಂಬುದಾಗಿ ಕರೆಯಲ್ಪಡುವ ಮತ್ತು ವರವುಳ್ಳ ಸೇವಕರುಗಳನ್ನು ಆತನು ನೇಮಿಸಿದ್ದಾನೆ. (ಎಫೆಸದವರಿಗೆ 4:7–11) ಅಧಿಕವಾದ ಜನರು ಕರ್ತನ ಮನೆಯನ್ನು ಕಟ್ಟಲು ಪ್ರಜೆವುಳ್ಳವರಾಗಿರುವ ಮತ್ತು ಅವರ ಸ್ವಂತ ತಾತ್ಕಾಲಿಕ ಮನೆಗಳನ್ನು ಅಧಿಕವಾಗಿ ಕಟ್ಟದಿರುವಂತಹ ತಕ್ಕ ಸಮಯದಲ್ಲಿ ನಾವುಗಳು ಇದ್ದೇವೆ. ಹಳೇ ದಿವಸಗಳಂತೆ ತನ್ನ ಜನರನ್ನು ಅವರ ಸ್ವಂತ ಮನೆಗಳನ್ನು ಕಟ್ಟುವುದನ್ನು ನಿಲ್ಲಿಸಲು (ಅವರ ಸ್ವಂತ ವೈಯಕ್ತಿಕ

ಐಷಾರಾಮಿಗಳು ಅಥವಾ ಖಾಸಗೀ ಕ್ರೈಸ್ತ ಉದ್ಯಮಗಳು) ಮತ್ತು ಸಭೆಯನ್ನು ಕಟ್ಟಲೂ ಹೂಡಿಕೆ ಮಾಡಿ ಎಂಬುದಾಗಿ ದೇವರು ಕರೆಯುವಂತಹ ಸಮಯವು ಬರುತ್ತದೆ. ಇದರ ಅರ್ಥವು ನಾವು ತ್ಯಾಗದಿಂದ ಬದುಕುವ ಹೊಸ ಜೀವನಶೈಲಿಗೆ ಹೊಂದಿಕೊಳ್ಳಲು ಸಿದ್ಧರಿರಬೇಕು. ಉದಾರವಾಗಿ ಕೊಡಬೇಕು ಮತ್ತು ನಿರ್ಭಯವಾಗಿ ಹೋಗಬೇಕು.

## ನಿಶ್ಯಬ್ದದ ವರ್ಷಗಳು

ಗಲಾತ್ಯದವರಿಗೆ 1:15-18, 2:1

**ಆದರೆ ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು ತನ್ನ ಮಗನನ್ನು ನಾನು ಅನ್ಯಜನರಲ್ಲಿ ಪ್ರಸಿದ್ಧಿಪಡಿಸುವವನಾಗಬೇಕೆಂದು ಆತನನ್ನು ನನ್ನೊಳಗೆ ಪ್ರಕಟಿಸುವದಕ್ಕೆ ಇಚ್ಛೈಸಿದಾಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸದೆ ಯೆರೂಸಲೇಮಿಗೆ ನನಗಿಂತ ಮುಂಚೆ ಅಪೊಸ್ತಲರಾಗಿದ್ದವರ ಬಳಿಗೂ ಹೋಗದೆ ಅರಬಸ್ಥಾನಕ್ಕೆ ಹೋಗಿ ತಿರಿಗಿ ದಮಸ್ಕಕ್ಕೆ ಬಂದೆನು ಮೂರುವರುಷಗಳಾದ ಮೇಲೆ ಕೇಫನ ಪರಿಚಿತಿಯನ್ನು ಮಾಡಿಕೊಳ್ಳಬೇಕೆಂದು ಯೆರೂಸಲೇಮಿಗೆ ಹೋಗಿ ಅವನ ಬಳಿಯಲ್ಲಿ ಹದಿನೈದು ದಿವಸ ಇದ್ದೆನು. ಹದಿನಾಲ್ಕು ವರುಷಗಳಾದ ಮೇಲೆ ತಿರಿಗಿ ಯೆರೂಸಲೇಮಿಗೆ ಹೋದೆನು.**

ದೇವರ ಅನೇಕ ಪುರುಷರು – ದೇವರು ಎಬ್ಬಿಸಿದಂತಹ ನಾಯಕರುಗಳು – ಸಿದ್ಧತೆಯಲ್ಲಿ ಅನೇಕ ''ನಿಶ್ಯಬ್ದದ'' ವರುಷಗಳನ್ನು ಕಳೆದರು ಎಂಬುದನ್ನು ವಚನ ಭಾಗಗಳ ಉದ್ದಕ್ಕೂ ನಾವು ಗಮನಿಸುತ್ತೇವೆ. ಅಂತಹ ವರ್ಷಗಳನ್ನೂ ನಾವು ''ನಿಶ್ಯಬ್ದದ'' ವರ್ಷ ಎಂಬುದಾಗಿ ಏಕೆ ಉಲ್ಲೇಖಿಸಿದ್ದೇವೆಂದರೆ, ಆ ಅವಧಿಯಲ್ಲಿ ಅವರು ಏನು ಮಾಡಿದರೆಂಬುದರ ಕುರಿತು ಹೆಚ್ಚಾಗಿ ಹೇಳಲ್ಪಟ್ಟಿಲ್ಲ ಅವರ ನಿಶ್ಯಬ್ದದ ವರ್ಷಗಳ ಕೊನೆಯಲ್ಲಿ ದೇವರು ಅವರನ್ನು ಒಂದು ಪ್ರಮುಖವಾದ ಸೇವೆಗೆ ನೇಮಿಸಿದನು ಮತ್ತು ಆರಂಭಿಸುವಂತೆ ಮಾಡಿದನು ಪೌಲನ ಜೀವಿತದಲ್ಲಿ ಇಂತಹದ್ದನ್ನು ಸ್ಪಷ್ಟವಾಗಿ ನೋಡುತ್ತೇವೆ. ಅವನು ರಕ್ಷಿಸಲ್ಪಟ್ಟನು ಮತ್ತು ಅಪೊಸ್ತಲನೆಂಬುದಾಗಿ ಕರೆಯಲ್ಪಟ್ಟನು ಆದರೆ ಅನೇಕ ವರ್ಷಗಳ ನಂತರವಷ್ಟೆ ಅಪೊಸ್ತರನಾಗಿರುವ ಸಂಪೂರ್ಣವಾದ ಅಭಿಷೇಕಕ್ಕೆ ಪ್ರವೇಶಿಸಿದನು. ಅವನ ಮನಸಾಂತರ ನಂತರ ಅನೇಕ ನಿಶ್ಯಬ್ದದ ವರುಷಗಳನ್ನು ಅರೆಬಿಯಾದಲ್ಲಿ ಕಳೆದನು. ಬಹುಶಃ 10 ವರ್ಷಗಳ ನಂತರ ಅಂತಿಯೋಕ್ಯದ ಸಭೆಯಲ್ಲಿ ಒಬ್ಬ ಬೋಧಕನಾಗಿ ಅವನ ಸಾರ್ವಜನಿಕ ಸೇವೆಯನ್ನು ಪ್ರಾರಂಭಿಸಿದನು. ಮೂರು ವರ್ಷಗಳ ನಂತರ ಅವರ ಅಪೊಸ್ತಲತ್ವದ ಕೆಲಸಗಳನ್ನು ಪ್ರಾರಂಭಿಸಲೂ ಪವಿತ್ರಾತ್ಮನಿಂದ ಕರೆಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 13:1-3) ಕರ್ತನಾದ ಯೇಸುವಿನ ಜೀವಿತದಲ್ಲಿ ಆತನ ಸಾರ್ವಜನಿಕ ಸೇವೆಯನ್ನು ಆರಂಭಿಸುವುದಕ್ಕೆ ಮೊದಲು 30 ನಿಶ್ಯಬ್ದ ವರ್ಷಗಳನ್ನು ಕಳೆದನು ಎಂಬುದಾಗಿ ನಾವು ನೋಡುತ್ತೇವೆ. ಯೋಸೇಫನು 13 ವರ್ಷಗಳು

ಕಾದುಕೊಂಡನು, ಮೋಶೆಯು 40 ವರ್ಷಗೂ ಕಾಯುತ್ತಿದ್ದನು, ಇದೇ ರೀತಿ ಪಟ್ಟಿ ಮುಂದುವರೆಯುತ್ತದೆ. ನಿಶ್ಯಬ್ದದ ವರ್ಷಗಳು ನಿಷ್ಕ್ರಿಯತೆಯ ಸಮಯಗಳಲ್ಲ ಎಂಬುದನ್ನು ನಾವು ಅರಿತುಕೊಳ್ಳುವುದು ಪ್ರಾಮುಖ್ಯವಾಗಿದೆ. ಬದಲಿಗೆ ಇದು ಕರೆಯಲ್ಪಟ್ಟಂತಹ ಒಬ್ಬನು ದೇವರು ಯಾವುದಕ್ಕೆ ಕರೆದಿದ್ದಾನೆ ಎಂಬಂತಹ ಪ್ರಾಮುಖ್ಯ ಅಂಶಗಳನ್ನು ಕಲಿಯುವಂತಹ ಸಿದ್ಧತೆಯ ಸಮಯವಾಗಿದೆ. ದೇವರು ಒಬ್ಬ ವ್ಯಕ್ತಿಯನ್ನು ಸಿದ್ಧತೆಯ ಮೂಲಕವಾಗಿ ಕೊಂಡೊಯ್ಯುವುದು ಇನ್ನೊಬ್ಬ ವ್ಯಕ್ತಿಯನ್ನು ಸಿದ್ಧತೆಯ ಮೂಲಕವಾಗಿ ಕೊಂಡೊಯ್ಯುವುದಕ್ಕಿಂತ ವಿಭಿನ್ನವಾಗಿರಬಹುದು. ದೇವರ ತರಭೇತಿಯ ಶಾಲೆಯ ವೈಯಕ್ತಿಕವಾಗಿ ಪ್ರತಿಯೊಬ್ಬರಿಗೂ ಸರಿಯಾಗಿ ಅಳತೆ ಮಾಡಿದ್ದು ಆಗಿದೆ. ನಮ್ಮಲ್ಲಿ ಅನೇಕರು ನಮ್ಮ ತರಬೇತಿಯ ಅವಧಿಯಲ್ಲಿರಬಹುದು. ನಾವು ಈಗ ಮಾಡುತ್ತಿರುವ ಅಸ್ತಿವಾರಗಳಾಗಿವೆ ಆದ್ದರಿಂದ ಕೆಲಸಕ್ಕೆ ನಂಬಿಗಸ್ತರಾಗಿರಿ ಬಹುತೇಕ ಎಲ್ಲರೂ, ಕಲಿಯಬೇಕು, ತರಬೇತಿ ಮತ್ತು ಸಿದ್ಧವಾಗಿರಬೇಕು.

# 4

# ನಮ್ಮ ಜೀವನವನ್ನು ವಿವೇಚನೆಯಿಂದ ಆಜ್ಞಾಪಿಸಿಕೊಳ್ಳಬೇಕು

ಪ್ರಸಂಗಿ 8:5 ಆ, 6 ಅ

**ಕಾಲವೂ ನ್ಯಾಯತೀರ್ಪು ಉಂಟೆಂಬದು ಜ್ಞಾನಿಯ ಬುದ್ಧಿಗೆ ಗೊತ್ತು ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯತೀರ್ಪು ಇರುವವಲ್ಲವೆ**

ಲೂಕ 12:56–56

**ಇದಲ್ಲದೆ ಆತನು ಜನರೆಲ್ಲರಿಗೂ ಹೇಳಿದ್ದೇನೆಂದರೆ ಪಶ್ಚಿಮ ದಿಕ್ಕಿನಲ್ಲಿ ಮೋಡ ಏಳುವದನ್ನು ನೀವು ನೋಡಿದ ಕೂಡಲೇ ಮಳೆ ಬರುತ್ತದೆ ಅನ್ನುತ್ತೀರಿ ಹಾಗೇ ಆಗುತ್ತದೆ. ದಕ್ಷಿಣ ದಿಕ್ಕಿನ ಗಾಳಿ ಬೀಸಲಾಗಿ ಸೆಕೆ ಹುಟ್ಟುವುದು ಅನ್ನುತ್ತೀರಿ ಅದೂ ಆಗುತ್ತದೆ. ಕಪಟಿಗಳನ್ನು ನೀವು ಭೂಮ್ಯಾಕಾಶಗಳ ಭಾವವನ್ನು ಶೋಧಿಸುವದಕ್ಕೆ ನಿಮಗೆ ಗೊತ್ತಿರುವಲ್ಲಿ ಈ ಸಮಯವನ್ನು ಶೋಧಿಸುವದಕ್ಕೆ ನಿಮಗೆ ಯಾಕೆ ಗೊತ್ತಿಲ್ಲ?**

ಒಬ್ಬ ಜ್ಞಾನವಂತ ಮನುಷ್ಯನು ಸರಿಯಾದ ಸಮಯ ಮತ್ತು ಯಾವುದೇ ಸೂಕ್ತ ಕಾರ್ಯಭಾರಕ್ಕೆ ಸರಿಯಾದ ಅವಧಿಯ ಕ್ರಿಯೆ ಇವೆರಡನ್ನು ಗುರುತಿಸಲು ಶಕ್ತರಾಗಿರುತ್ತಾರೆ. ಪ್ರತಿಯೊಂದು ವಿಚಾರ ಮತ್ತು ಧ್ಯೇಯಗಳೂ ಒಂದು ಸೇವೆಯ ಆರಂಭ, ಮದುವೆ ಒಂದು ವೃತ್ತಿಯಲ್ಲಿ ಬದಲಾವಣೆ, ಸುವಾರ್ತೆಯ ಕಾರಣಕ್ಕಾಗಿ ಕಾರ್ಯತಂತ್ರದೊಡನೆ ಹೊಸ ಜಾಗಕ್ಕೆ ಸ್ಥಳಾಂತರ, ಹೊಸ ವ್ಯಾಪಾರಕ್ಕೆ ಕ್ಷೇತ್ರಕ್ಕೆ ಪ್ರವೇಶಿಸುವುದು – ಮುಂತಾದವುಗಳಿಗೆ ಒಂದು ಸರಿಯಾದ ಸಮಯವಿದೆ ಮತ್ತು ತೆಗೆದುಕೊಳ್ಳಬೇಕಾದ ಸರಿಯಾದ ಕ್ರಿಯೆಯ ಕ್ರಮವಿದೆ (ಸರಿಯಾದ ವಿಷಯವನ್ನು ಮಾಡುವುದು) ದೇವರು ನಮ್ಮನ್ನು ಜ್ಞಾನವಂತ ಜನರಾಗಿರಲೂ – ಸಮಯ ಮತ್ತು ನ್ಯಾಯತೀರ್ಪು ಎರಡನ್ನೂ ಗ್ರಹಿಸಲೂ ಶಕ್ತರಾದ ಜನರಾಗಿರಲೂ ಕರೆದಿದ್ದಾನೆ.

ನಮ್ಮ ಜೀವಿತಗಳಲ್ಲಿನ (ವ್ಯಕ್ತಿಗತವಾಗಿ ಅಥವಾ ಸಾಮೂಹಿಕವಾಗಿ) ಸಮಯ ಮತ್ತು ಕಾಲಗಳನ್ನು ಅರಿತುಕೊಳ್ಳಬೇಕು. ಸೂಕ್ತವಾದ ಕಾರ್ಯರೂಪವನ್ನು ತೆಗೆದುಕೊಳ್ಳುವ ಜವಬ್ದಾರಿಯೊಡನೆ ಅದನ್ನು ತರಬೇಕು. ಪೌಲನು ಹೀಗೆ ಬರೆಯುತ್ತಾನೆ ''ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು

ಇದನ್ನೆಲ್ಲಾ ಮಾಡಿರಿ ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು ಇರುಳು ಬಹಳ ಮಟ್ಟಿಗೆ ಕಳೆಯಿತು ಹಗಲು ಸಮೀಪವಾಯಿತು ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ. ದುಂದೌತಣ, ಕುಡಿತಗಳಲ್ಲಿಯಾಗಲಿ ಜಗಳ ಹೊಟ್ಟೇ ಕಿಚ್ಚುಗಳಲ್ಲಿಯಾಗಲಿ ಕಾಲ ಕಳೆಯದೆ ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ (ರೋಮಾಪುರದವರಿಗೆ 13:11–13). ಸಮಯವು ಏನಾಗಿದೆಂಬುದನ್ನು ನಾವು ತಿಳಿದಿರುವುದರಿಂದ ನಾವುಗಳು ಸರಿಹೊಂದಿಕೊಂಡು ಜೀವಿಸಲು ಎಚ್ಚರಿಸಲ್ಪಟ್ಟಿದ್ದೇವೆ. ವಿವೇಚನೆಯುಳ್ಳ ಜನರು ಅವರ ಜೀವಿತಗಳನ್ನು ಸಮಯಗಳ ಸೂಕ್ತವಾದ ತಿಳುವಳಿಕೆಯೊಡನೆ ಆಜ್ಞಾಪಿಸಿಕೊಂಡಂತಹ ಜನರಾಗಿರುತ್ತಾರೆ.

''ಕಾಲಕ್ಕೆ ಅನುಗುಣವಾಗಿ ಮಾತನಾಡುವುದು'' ಹೇಗೆ ಎಂಬುದನ್ನು ತಿಳಿದ ಜನರು ಇವರಾಗಿರುತ್ತಾರೆ (ಜ್ಞಾನೋಕ್ತಿಗಳು 15:23) ಯಾಕೆಂದರೆ ದೇವರ ಸ್ವರವನ್ನು ಕೇಳುವುದಕ್ಕಾಗಿ ತಮ್ಮನ್ನು ಶಿಸ್ತುಕ್ರಮಗೊಳಿಸಿಕೊಂಡಿರುತ್ತಾರೆ. (ಯೆಶಾಯ 50:4,5) ದೇವರ ಸೇವೆ ಮಾಡಲು ಅವರು ಯಾವಾಗಲೂ ಸಿದ್ಧವಾಗಿರುತ್ತಾರೆ. ಅವರು ''ಕಾಲದಲ್ಲಿಯೂ ಮತ್ತು ಅನುಕೂಲವಲ್ಲದ ಕಾಲದಲ್ಲಿಯೂ ಸಿದ್ಧವಾಗಿರುತ್ತಾರೆ'' (2 ತಿಮೊಥೆಯನಿಗೆ 4:2) ದೇವರು ಅವರನ್ನು ಯಾವಾಗ ಬೇಕಾದರೂ ಕರೆಯಬಹುದು ಯಾಕೆಂದರೆ ಅವರು ಜೀವಿಸುವಂತಹ ಘಂಟೆಯ ತುರ್ತುವಿನ ಕುರಿತು ಅರಿತವರಾಗಿರುತ್ತಾರೆ. ಆದದರಿಂದ ಅವರು ನಿರಂತರವಾಗಿ ಸಿದ್ಧಗೊಂಡಿರುವ ಶಿಸ್ತುಕ್ರಮವುಳ್ಳ ಜೀವನವನ್ನು ಜೀವಿಸುತ್ತಾರೆ ಅವರು ಹೃದಯವನ್ನು ಕಳಕೊಳ್ಳದವರು ಮತ್ತು ''ತಕ್ಕ ಕಾಲದಲ್ಲಿ ಅವರು ಬಹುಮಾನದ ಫಲವನ್ನು ಹೊಂದುವರು ಎಂಬುದನ್ನು ತಿಳಿದು ಒಳ್ಳೆದನ್ನು ಮಾಡುವುದರಲ್ಲಿ ಸೋತುಹೋಗದವರಾಗಿರುತ್ತಾರೆ (ಗಲಾತ್ಯದವರಿಗೆ 6:9) ಅವರು ಪ್ರಖ್ಯಾತಿಯನ್ನು ಹುಡುಕದೆ ಇಲ್ಲವೇ ಅವರ ಅಧಿಕಾರವನ್ನು ದುರುಪಯೋಗ ಮಾಡದೇ ದೀನತೆಯಲ್ಲಿ ನಡೆಯುವ ಮತ್ತು ಜೀವಿಸುವ ಜನರಾಗಿರುತ್ತಾರೆ. ಅವರು ಜನರಿಂದ ಮುಖಸ್ತುತಿಯನ್ನು ಹುಡುಕುವವರಲ್ಲ ಯಾಕೆಂದರೆ ''ತಕ್ಕ ಸಮಯದಲ್ಲಿ'' ದೇವರು ಅವರನ್ನು ಮೇಲೆತ್ತುತ್ತಾನೆಂಬುದನ್ನು ಅರಿತಿರುತ್ತಾರೆ. (1 ಪೇತ್ರನು 5:5,6) ನಮ್ಮ ಜೀವಿತಗಳನ್ನು ಹೇಗೆ ಆಜ್ಞಾಪಿಸಿಕೊಂಡಿದ್ದೇವೆ? ದೇವರ ಗಡಿಯಾರಕ್ಕೆ ಅನುಗುಣವಾಗಿ ಜೀವಿಸಲು ಪರಿಶ್ರಮಗಳನ್ನು ಮಾಡುತ್ತಿದ್ದೇವಾ ಮತ್ತು ಆತನೊಂದಿಗೆ ಹಂತಹಂತವಾಗಿ ಮತ್ತು ಸಮಯಕ್ಕೆ ಸರಿಯಾಗ ನಡೆಯುತ್ತಿದ್ದೇವಾ? ಅಥವಾ ಇತರರು ಕ್ರಿಯೆಗಳನ್ನು

ಮಾಡುತ್ತಿರುವುದನ್ನು ನೋಡಿ ನಾವು ಸಹ ಸುಮ್ಮನೆ ಕಾರ್ಯಗಳನ್ನು ಮಾಡುತ್ತಾ ಒಂದು ಗೊತ್ತು ಗುರಿಯಿಲ್ಲದ ರೀತಿಯಲ್ಲಿ ಜೀವಿಸುತ್ತಿದ್ದೇವಾ. ನಮ್ಮ ಆದ್ಯತೆಗಳನ್ನು ಪುನಃ ಆಜ್ಞಾಪಿಸುವವರಾಗಿ, ನಮ್ಮ ವೇಳಾಪಟ್ಟಿಗಳನ್ನು ಬದಲಾಯಿಸಿದವರಾಗಿ, ದೇವರು ನಮ್ಮನ್ನು ತೆಗೆದುಕೊಂಡು ಹೋಗುತ್ತಿರುವ ಕಾಲ ಮತ್ತು ಸಮಯಕ್ಕೆ ಅನುಸಾರವಾಗಿ ನಮ್ಮ ಜೀವಿತಗಳನ್ನು ಮಾರ್ಪಡಿಸಿಕೊಳ್ಳುವ – ವಿವೇಚನೆಯೊಡನೆ ನಮ್ಮ ಜೀವಿತಗಳನ್ನು ಆದೇಶಿಸಿಕೊಳ್ಳೋಣ.

ಸಮಯದ ಕುರಿತು ಗ್ರಹಿಕೆಯುಳ್ಳವರಾಗಿರುವುದು ಚಾಲ್ತಿಯಲ್ಲಿರುವ ಪರಿಸ್ಥಿತಿಗಳನ್ನು ಗಮನಿಸುವುದರಿಂದ ಹವಾಮಾನವನ್ನು ಹೇಳುವಂತಹ ರೀತಿಯಲ್ಲಿ ಶಕ್ತಗೊಂಡಂತಾಗಿರುತ್ತದೆ. ಯೇಸುವು ಇಂತಹ ಹೋಲಿಕೆಯನ್ನು ಆತನನ್ನ ಹಿಂಬಾಲಿಸಿದಂತಹ ದೊಡ್ಡ ಗುಂಪನ್ನು ಗಟ್ಟಿಯಾಗಿ ಆತನು ಗದರಿಸಿದ್ದರಲ್ಲಿ ಉಪಯೋಗಿಸಿದ್ದಾನೆ. ಜನರು ಮೋಡ ಕವಿದ ವಾತಾವರಣಗಳನ್ನು ನೋಡಿದರು ಮತ್ತು ಗಾಳಿಯ ಮಾರ್ಗದರ್ಶನ ನೋಡಿ ಹೀಗೆ ಹವಾಮಾನವನ್ನು ಹೇಳುತ್ತಾರೆ. ಹಾಗಿದ್ದರೂ, ಅವರು ''ಕಾಲವನ್ನು ಗ್ರಹಿಸುವದು'' ಸಾಧ್ಯವಾಗುವುದಿಲ್ಲ. ಇಂತಹ ಉಪಯುಕ್ತವಾದ ಸಾದೃಶ್ಯದಿಂದ ನಮ್ಮನ್ನು ದೇವರು ನಡೆಸುತ್ತಿರುವಂತಹ ಸಮಯಗಳು ಮತ್ತು ಋತುಗಳಿಗೆ ಕ್ರಮವಾಗಿ ಪ್ರತಿಕ್ರಿಯೆ ಮತ್ತು ಗ್ರಹಿಕೆ ಹೊಂದಲೂ ಕೆಲವು ಅಭಿಪ್ರಾಯಗಳು ಸಹಾಯ ಮಾಡುತ್ತವೆ. ಸಮಯ ಮತ್ತು ಋತುಗಳನ್ನು ಗ್ರಹಿಸಲೂ ವಿಕ್ಷಕರಾಗಿರುವುದು ಪ್ರಮುಖ ಅಂಶವಾಗಿದೆ.

## ನಿಮ್ಮೊಳಗೆ ಇರುವ ದೇವರ ಆತ್ಮನ ನಡೆಸುವಿಕೆ ಗಮನಿಸಿರಿ

ನಿಮ್ಮಲ್ಲಿ ಕಾರ್ಯ ಮಾಡುವುದರ ಪ್ರಕ್ರಿಯೆಯಲ್ಲಿ ಆತನ ಉದ್ದೇಶಗಳು ಮತ್ತು ಆತನ ಯೋಜನೆಗಳನ್ನು ಅನಾವರಣಗೊಳಿಸುತ್ತಾನೆ. ಆತನ ವಾಕ್ಯ ಮತ್ತು ಆತನ ಆತ್ಮನ ಮೂಲಕವಾಗಿ ನಿಮ್ಮಲ್ಲಿ ಬಲಿಷ್ಟವಾದ ಇಚ್ಛೆಗಳು, ಕನಸುಗಳು ಮತ್ತು ನಿರೀಕ್ಷೆಗಳಿಗೆ ಜನ್ಮವನ್ನು ನೀಡುತ್ತಾನೆ.

ಕಳೆದು ಹೋದವರನ್ನು ಸಂಧಿಸುವ, ಆತನ ವಾಕ್ಯವನ್ನು ಬೋಧಿಸುವವರಾಗಿರುವುದು, ಒಬ್ಬ ವ್ಯವಹಾರಗಾರನಾಗಿರುವುದು ಮುಂತಾದವುಗಳು ಆಂತರ್ಯ ಮನುಷ್ಯನಲ್ಲಿ ಹೊತ್ತಿಸಲ್ಪಟ್ಟವರಾಗಿ ಒಂದು ಉರಿಯುವ ಅನುರಾಗವನ್ನು ನೀವು ಕಾಣುವಿರಿ. ಇದು ದೇವರು ನಿಮ್ಮೊಂದಿಗೆ ಸಂಪರ್ಕಿಸುತ್ತಿರುವುದು ಆಗಿದೆ. ಅಂತಹ ದೇವರ ಕಾರ್ಯಗಳಿಗೆ ಗಮನವಿಡುವವರಾಗಿರಿ.

## ನಿಮ್ಮ ಜೀವನದ ಪರಿಸ್ಥಿತಿಗಳು ಮತ್ತು ಘಟನೆಗಳನ್ನು ಗಮನಿಸಿರಿ

ನಿಮ್ಮ ಸಮಯಗಳು ನಿಮ್ಮ ಜೀವನದ ಘಟನೆಗಳು ದೇವರ ಕೈಯಲ್ಲಿವೆ (ಕೀರ್ತನೆಗಳು 31:15) ವಿಷಯಗಳು ಸುಮ್ಮನೇ ಜರುಗುವುದಿಲ್ಲ. ಅನೇಕ ಸಮಯಗಳಲ್ಲಿ ದೇವರು ನಿಮಗೋಸ್ಕರವಾಗಿ ನಿರ್ದಿಷ್ಟ ಘಟನೆಗಳನ್ನು ಮತ್ತು ಪರಿಸ್ಥಿತಿಗಳನ್ನು ಏರ್ಪಡಿಸುತ್ತಾನೆ. ಎಂಬುದನ್ನು ಅರಿತುಕೊಳ್ಳಿರಿ. ನಿಮ್ಮ ಮಾರ್ಗಕ್ಕೆ ಬರುವಂತಹ ಇಂತಹ ವಿಷಯಗಳ ಮೂಲಕವಾಗಿ ಆತನು ಕೆಲವೊಂದನ್ನು ನಿಮಗೆ ತಲುಪಿಸುತ್ತಾನೆ. ಬಹುಶಃ ಇದು ಒಬ್ಬ ದೇವರ ಸೇವಕನೊಡನೆ ದೈವಿಕ ನೇಮಕಾತಿ ಇರಬಹುದು ಅಥವಾ ಒಂದು ದೊಡ್ಡ ನಿಗಮದ ಅಧ್ಯಕ್ಷರೊಡನೆ ನೇಮಕಾತಿ ಇರಬಹುದು ಇದು ಒಂದು ನಿರ್ದಿಷ್ಟವಾದ ಕೆಲಸದಲ್ಲಿ ತೊಡಗಿಸಿಕೊಳ್ಳುವ ಅವಕಾಶವಾಗಿರಬಹುದು. ಪ್ರಸಂಗಿಸಲ್ಪಟ್ಟ ಒಂದು ನಿರ್ದಿಷ್ಟ ಸಂದೇಶ ಕೇಳುವುದಾಗಿರಬಹುದು, ಅಥವಾ ಸ್ನೇಹಿತನು ಮಾಡುತ್ತಿರುವಂತಹ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳುವುದು ಮುಂತಾದವುಗಳು ಆಗಿರಬಹುದು. ದೇವರು ನಿಮ್ಮೊಂದಿಗೆ ಜೀವನದ ಸಾಧಾರಣ ಘಟನೆಗಳ ಮೂಲಕವಾಗಿ ಮಾತಾನಾಡುತ್ತಾನೆ. ಆತನು ಮಾತಾನಾಡುತ್ತಿರುವಾಗ ಸೂಕ್ಷ್ಮತೆಯುಳ್ಳವರಾಗಿರಿ (ಆತನು ಮಾತಾನಾಡದಿರುವಾಗಲೂ) ಮತ್ತು ಆತನು ಏನು ಹೇಳುತ್ತಾನೆಂಬುದನ್ನು ಗಮನಿಸಿರಿ.

## ನಿಮ್ಮಲ್ಲಿ ದೇವರ ಆತ್ಮದ ಚಲನೆಗೆ ಸಂಬಂಧಿಸಿಕೊಂಡು ತಕ್ಷಣದ ಘಟನಗಳೊಡನೆ ಕ್ರಮ ತೆಗೆದುಕೊಳ್ಳಿರಿ

ನೀವು ರಸ್ತೆ ಬೀದಿಗಳಲ್ಲಿ ಹೊರಬಂದಿದ್ದರೆ ಮತ್ತು ಕಪ್ಪಾದ ಮೋಡಗಳು ಆಕಾಶದಲ್ಲಿ ಒಟ್ಟಾಗಿ ಆಕಾಶದಲ್ಲಿ ಕೂಡಿಕೊಳ್ಳುತ್ತಿರುವುದನ್ನು ನೀವು ನೋಡುತ್ತೀರಿ ಮತ್ತು ಮಳೆ ಬರುವ ಸೂಚನೆಯನ್ನು ಗ್ರಹಿಸಲು ಪ್ರಾರಂಭಿಸುತ್ತೀರಿ ಅಥವಾ ಮೊದಲ ಹನಿಗಳು ಬೀಳುವುದನ್ನು ಅನುಭವಿಸುತ್ತೀರಿ, ನೀವು ಸಾಧಾರಣವಾಗಿ ಸಂರಕ್ಷಿಸಿಕೊಳ್ಳದೇ ನಿಂತುಕೊಳ್ಳುವುದಿಲ್ಲ ಮತ್ತು ಒದ್ದೆಯಾಗುವುದಿಲ್ಲ.

ನಿಮ್ಮ ಛತ್ರಿಯನ್ನು ಹೊರಗಡೆ ತೆಗೆದು ನಿಲ್ಲುತ್ತೀರ ಅಥವಾ ಯಾವುದಾದರೊಂದು ಆಶ್ರಯದ ಅಡಿಯಲ್ಲಿ ಹೋಗುತ್ತೀರಾ ಅದೇ ರೀತಿಯಾಗಿ ಆತ್ಮನ ನಡೆಸುವಿಕೆಗೆ ಮತ್ತು ನಿಮ್ಮ ಜೀವಿತದಲ್ಲಿನ ಪರಿಸ್ಥಿತಿಗಳಿಗೆ ಸೂಕ್ಷತೆಯುಳ್ಳವರಾಗಿರುವಾಗ, ನಿರಂತರವಾಗಿ ಎರಡನ್ನು ಸಂಬಂಧಿಸಿ ನಂತರ ಸೂಕ್ತ ಕ್ರಿಯೆಯ ಕ್ರಮ ತೆಗೆದುಕೊಳ್ಳಬೇಕು.

## ಜೀವನದ ಋತುಗಳಿಗೆ ಸೂಕ್ಷ್ಮವಾಗಿರಿ

ತೀವ್ರವಾದ ಉಷ್ಣಾಂಶವಿರುವ ಪ್ರಪಂಚದ ಭಾಗಗಳಲ್ಲಿ ಜೀವಿಸುವಂತಹವರಿಗೆ ಆ ಋತುವಿಗೆ ಹೊಂದಿಕೊಳ್ಳುವಂತಹ ಬಟ್ಟೆಯನ್ನು ಧರಿಸಿಕೊಳ್ಳುವುದರ ಪ್ರಾಮುಖ್ಯತೆಯು ತಿಳಿದಿರುತ್ತದೆ. ಚಳಿಗಾಲದಲ್ಲಿ ದಪ್ಪದಾದ ಬೆಚ್ಚಗಿನ ಬಟ್ಟೆಯನ್ನು ಹೊರಗೆಳೆಯುತ್ತಾರೆ ಬೇಸಿಗೆ ಕಾಲದಲ್ಲಿ ಅವರು ಬಹಳ ಹಗುರವಾದ ಬಟ್ಟೆಗಳನ್ನು ಧರಿಸುತ್ತಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಚಾಲ್ತಿಯಲ್ಲಿರುವ ಹವಾಮಾನ ಪರಿಸ್ಥಿತಿಗಳಿಗನುಗುಣವಾಗಿ ನಮ್ಮ ವಸ್ತ್ರ ಮಾದರಿಗಳನ್ನು ಮಾರ್ಪಡಿಸಿಕೊಳ್ಳುತ್ತೇವೆ. ಇದೇ ಅರ್ಥದಲ್ಲಿ ವಿಶ್ವಾಸಿಗಳಾಗಿ, ದೇವರು ನಮ್ಮನ್ನು ತೆಗೆದುಕೊಂಡು ಹೋಗುತ್ತಿರುವಂತಹ ಜೀವನದ ಸಮಯಕ್ಕೆ ಅನುಗುಣವಾಗಿ ನಾವು ವರ್ತಿಸಬೇಕು ಮತ್ತು ನಮ್ಮ ಜೀವಿತಗಳನ್ನು ಆದೇಶಿಸಿಕೊಳ್ಳಬೇಕು.

## ಸಿದ್ಧತೆಯ ಋತುಗಳ ಮೂಲಕವಾಗಿ ದೇವರು ನಿಮ್ಮನ್ನು ಕರೆದೊಯ್ಯುತ್ತಾನೆ.

ಆತನು ಬಯಸುವ ಕೆಲಸವನ್ನು ಮಾಡಲೂ ಆತನಿಂದ ಕರೆಯಲ್ಪಟ್ಟವರಾಗಿ ನಮ್ಮನ್ನು ದೇವರು ಸಿದ್ಧಪಡಿಸುತ್ತಾನೆಂಬುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳುತ್ತೇವೆ. ಅನೇಕವಾದ ಸಿದ್ಧತೆಯ ಕಾಲಗಳಿವೆ ಎಂಬುದನ್ನು ಸಾಮಾನ್ಯವಾಗಿ ಅರಿತುಕೊಳ್ಳಲೂ ನಾವು ವಿಫಲವಾಗುತ್ತೇವೆ. ನೀವುಗಳು ಹೊಸದಾದ ಕುಶಲತೆ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ ಮತ್ತು ಕಲಿಯುವ ಸಿದ್ಧತೆಯ ಒಂದು ಕಾಲವನ್ನು ಹಾದು ಹೋಗಬಹುದು. ಇದು ಒಂದು ಸಾರಿ ಮುಗಿದ ಮೇಲೆ, ನಿಮ್ಮ ಹೃದಯದಲ್ಲಿರುವ ನಿಮ್ಮ ಯೋಜನೆ ಮತ್ತು ಕನಸ್ಸುಗಳನ್ನು ಕೊಂಡೊಯ್ಯಲು ದೇವರು ಬಿಡುಗಡೆಗೊಳಿಸುತ್ತಾನೆ. ಎಂಬುದಾಗಿ ನೀವು ಊಹಿಸಬಹುದು ಈ ಒಂದು ಸಿದ್ಧತೆಯ ಕಾಲವು ಮುಗಿದಾಗ, ನಿಮ್ಮ ಹೃದಯದಲ್ಲಿರುವ ಕನಸ್ಸುಗಳನ್ನು ನೆರವೇರಿಸಲೂ ಆರಂಭಿಸುವ ಬದಲಾಗಿ ನಿಮ್ಮ ಜೀವಿತದಲ್ಲಿನ ಇತರೆ ಕೆಲವು ಅಂಶಗಳೊಡನೆ ದೇವರು ವ್ಯವಹರಿಸಲೂ ಇನ್ನೊಂದು ಸಿದ್ಧತೆಯ ಕಾಲಕ್ಕೆ ನೀವು ಹೆಜ್ಜೆಯನ್ನಿಡುವಂತದ್ದು ಆಶ್ಚರ್ಯಕರವಾಗಿ ಬರಬಹುದು.

ಬಹುಶಃ ಈ ಒಂದು ಕಾಲದಲ್ಲಿ, ನಿಮ್ಮ ನಡವಳಿಕೆಯನ್ನು ಬಲಗೊಳಿಸಬಹುದು ಮತ್ತು ಬೆಳೆಸಬಹುದು ಮತ್ತು ಶಿಸ್ತು ಕ್ರಮಗೊಳಿಸಬಹುದು – ನಿಮ್ಮ ಹೃದಯದ ಸಮಸ್ಯೆಗಳೊಡನೆ ವ್ಯವಹರಿಸಲೂ ಆತನು ಪ್ರಾರಂಭಿಸಬಹುದು.

## ಪ್ರತಿಯೊಂದು ಕಾಲವು ಮುಂದಿನದಕ್ಕೆ ಸಿದ್ಧಗೊಳಿಸುತ್ತದೆ

ನಿಮ್ಮನ್ನು ದೇವರು ತೆಗೆದುಕೊಂಡು ಹೋಗುತ್ತಿರುವ ವ್ಯತ್ಯಾಸಕರವಾದ ಕಾಲಗಳು, ಅದರ ಮೂಲಕವಾಗಿ ಹಾದು ಹೋಗುವುದು ಮತು ಮರೆತುಬಿಡುವಂತಹ ಪ್ರತ್ಯೇಕಿಸಲ್ಪಟ್ಟಂತಹ ಜೀವನದ ಅವಧಿಗಳಾಗಿರುವುದಿಲ್ಲ ಬದಲಿಗೆ ಪ್ರತಿಯೊಂದು ಕಾಲವು ಹಿಂದಿನ ಜೀವನದ ಸಮಯದ ಮೇಲೆ ಕಟ್ಟಲ್ಪಟ್ಟಿರುತ್ತದೆ. ಈ ಒಂದು ಜೀವನದ ಋತುವಿನಲ್ಲಿ ನೀವು ಕಲಿಯುವಂತಹ ವಿಷಯಗಳು ಭವಿಷ್ಯದ ಜೀವನದ ಋತುಗಳಿಗೆ ಅಥವಾ ಮುಂದೆ ಬರಲಿಕ್ಕಿರುವ ಸವಾಲುಗಳಿಗೆ ನಿಮ್ಮನ್ನು ಸಿದ್ಧಗೊಳಿಸುತ್ತದೆ. ಆದ್ದರಿಂದ ಜೀವನದ ಎಲ್ಲಾ ಋತುಗಳು ಪ್ರಾಮುಖ್ಯವಾದದು.

## ಋತುಗಳು ಬದಲಾಗುವಾಗ ನೀವು ಬದಲಾವಣೆಗೆ ಚಿತ್ತವುಳ್ಳವರಾಗಿರಿ

ಋತುಗಳು ಬದಲಾವಣೆ ಆಗುವಾಗ ಜೀವನವು ಮಾರ್ಪಾಟುಗಳನ್ನು ಹಾದುಹೋಗುತ್ತದೆ. ಬದಲಾವಣೆಯು ಅವಶ್ಯಕವಾಗಿ ಕಂಡುಬರುತ್ತದೆ. ಉದಾಹರಣೆಗೆ ಪ್ರಸ್ತುತವಾದ ಜೀವನದ ಸಮಯದಲ್ಲಿ ನೀವು ಒಂದು ನಿರ್ದಿಷ್ಟ ಸ್ಥಳದಲ್ಲಿ ಜೀವಿಸುತ್ತೀರಬಹುದು ಮತ್ತು ನಿರ್ದಿಷ್ಟವಾದ ಕಾರ್ಯಚಟುವಟಿಕೆಯಲ್ಲಿ ತೊಡಗಿಸಿಕೊಂಡವರಾಗಿರಬಹುದು. ನೀವು ಇರುವಂತಹ ಋತುವನ್ನು ದೇವರು ಬದಲಾವಣೆ ಮಾಡುವಾಗ, ನೀವು ಹೊಸ ಜಾಗಕ್ಕೆ ಹೋಗಬೇಕು, ಹೊಸ ಸ್ನೇಹಿತರುಗಳನ್ನು ಮಾಡಿಕೊಳ್ಳಬೇಕು ಮತ್ತು ಒಂದು ಹೊಸದಾದ ವಿಧದ ಚಟುವಟಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂಬುದಾಗಿ ಸಹ ದೇವರು ಅಪೇಕ್ಷಿಸಬಹುದು. ಹೇಗಾದರೂ, ಹಲವರು ಇದನ್ನು ಮಾಡಲು ಕಷ್ಟಕರವೆಂದು ಅರಿತುಕೊಳ್ಳಬಹುದು, ಯಾಕೆಂದರೆ ನಿಮಗೆ ಚಿರಪರಿಚಿತವಿರುವವುಗಳೊಡನೆ ನೀವು ಹಿತಕರವಾಗಿರುತ್ತೀರಿ ಮತ್ತು ಪರಿಚಯವಿಲ್ಲದ್ದರ ಬಗ್ಗೆ ಭಯವುಳ್ಳವರಾಗಿರಬಹುದು. ನೀವು ಪ್ರಸ್ತುತದಲ್ಲಿ ಇರುವಂತಹದ್ದರಿಂದ ನಿಮಗಾಗಿ ದೇವರು ಭವಿಷ್ಯತ್ತಿನಲ್ಲಿ ಹೊಂದಿರುವವುಗಳಿಗೆ ಹೋಗಲೂ ಚಿತ್ತವುಳ್ಳವರಾಗಿರಬೇಕು.

## ದೂರದೃಷ್ಟಿ ಹೊಂದಿರಿ ಮತ್ತು ಮುಂದಿನ ಋತುವಿಗಾಗಿ ಸಿದ್ಧಗೊಂಡಿರಿ

ಕೆಲವೊಮ್ಮೆ, ಒಂದು ನಿರ್ದಿಷ್ಟವಾದ ಸಮಯದಲ್ಲಿ ನಿಮ್ಮ ಜೀವಿತದ ಋತುವು ಬದಲಾಗುತ್ತದೆಂದು ನೀವು ತಿಳಿದವರಾಗಿರುತ್ತೀರ. ಉದಾಹರಣೆಗೆ, ನೀವು ಒಬ್ಬಂಟಿಗನಾಗಿರುವಂತದ್ದರಿಂದ ಇಂದಿನಿಂದ ಕೆಲವು ತಿಂಗಳುಗಳಲ್ಲಿ ಒಬ್ಬ ಮದುವೆಯಾದ ವ್ಯಕ್ತಿಯ? ಆಗಿ ಕಂಡು ಬರಬಹುದು ಈ ಒಂದು ಬದಲಾವಣೆಯು

ಭವಿಷ್ಯದಲ್ಲಿ ತುಂಬಾ ದೂರವಿಲ್ಲದ್ದಾಗಿ ಬರುವಾಗ, ಅದಕ್ಕಾಗಿ ಸಾಧ್ಯವಾಗುವಷ್ಟು ಮಟ್ಟಿಗೆ ಸಿದ್ಧವಾಗುತ್ತೀರ ಮತ್ತು ಯೋಜನೆ ಮಾಡುತ್ತೀರ ಎಂಬುದು ಅರಿವಿದೆ ಬದಲಾವಣೆಯ ಸಮಯವು ಬರುವಾಗ ತಿಳಿಯದೆ ಸಿಕ್ಕಿ ಹಾಕಿಕೊಳ್ಳ ಬೇಡಿರಿ. ಈ ಬದಲಾವಣೆಯ ಸಮಸ್ಯೆಗಳ ಮೇಲೆ ಪರಿಣಾಮ ಬೀರುವಂತಹವುಗಳ ಮೂಲಕವಾಗಿ ಯೋಚಿಸಿರಿ ಮತ್ತು ಉತ್ತಮವಾಗಿ ಸಿದ್ಧಗೊಂಡಿರಿ.

## ನೀವು ಇರುವಂತಹ ಋತುವನ್ನು ಆನಂದಿಸಿರಿ

ಜೀವನದ ಪ್ರತಿಯೊಂದು ಋತುವನ್ನು ಸಂತೋಷಿಸಲು ನೀವು ಕಲಿಯಬೇಕು. ಜೀವನದ ಕೆಲವು ಕಾಲಗಳು ಇತರರಂತೆ ಅಷ್ಟ ಮನೋಹರವಾಗಿರುವುದಿಲ್ಲ. ಅದೇನೇ ಇದ್ದರೂ, ಪ್ರಯಾಣವನ್ನು ಆನಂದಿಸುವುದನ್ನು ನೀವು ಕಲಿಯಬೇಕು ಯಾಕೆಂದರೆ ಋತುವು ಒಂದು ಮೌಲ್ಯವನ್ನು ಹೊಂದಿದೆ.

## ಯಾವಾಗ ''ಕೈರೋಸ್'' ಜರುಗುತ್ತದೆ?

ನಾವು ಮೊದಲೇ ತಿಳಿಸಿದಂತೆ , ''ಕೈರೋಸ್'' ನಮ್ಮ ಜೀವಿತದಲ್ಲಿ ನಿರ್ದಿಷ್ಟ ಘಟನೆಗಳು ಒಟ್ಟಾಗಿ ಸೇರಿಬರುವುದು ಅದು ತಕ್ಕ ಕಾಲವನ್ನು ರಚಿಸುವುದಾಗಿದೆ. ವೈಯಕ್ತಿಕವಾದ ವಿಚಾರಗಳಲ್ಲಿ ''ಕೈರೋಸ್'' ದೇವರಿಗಿಂತ ನಮ್ಮ ಮೇಲೆ ಹೆಚ್ಚು ಅವಲಂಬಿತವಾಗಿರುತ್ತದೆ.

ಉದಾಹರಣೆಗೆ , ನಿಮ್ಮ ಸೇವೆ ಅಥವಾ ವ್ಯಾಪಾರವನ್ನು ಆರಂಭಿಸಲು ''ಕೈರೋಸ್'' ಸೇವೆಯನ್ನು ಆರಂಭಿಸುತ್ತೇನೆ ಎಂಬು ಕಾಯುತ್ತಿರುವಂತಹ ಆ ವ್ಯಕ್ತಿಗಾಗಿ, ದೇವರು ಈ ವ್ಯಕ್ತಿಯು ಸಿದ್ಧವಾಗಿದ್ದಾನ ಎಂಬುದನ್ನು ನೋಡಿದಾಗ ''ಕೈರೋಸ್'' ಸಮಯ ಬರುತ್ತದೆ ಈ ಸಿದ್ಧತೆಯು ಅವನ ಜೀವನದಲ್ಲಿ ದೇವರು ವ್ಯವಹರಿಸುವವುಗಳಿಗೆ ಅವನು ಹೇಗೆ ಪ್ರತಿಕ್ರಿಯೆ ತೋರುತ್ತಾನೆ ಎಂಬುದರ ಮೇಲೆ ಅವಲಂಬಿತವಾಗಿರತ್ತದೆ. ಅವನಲ್ಲಿ ದೇವರು ಇಷ್ಟಪಡುವ ನಡವಳಿಕೆ, ಪ್ರೇರಣೆಗಳ ಶುದ್ಧತೆ, ಸರಿಯಾದ ಆಲೋಚನೆಗಳು ಮತ್ತು ಒಬ್ಬ ಸೇವಕನ ಹೃದಯವು ಅವನಲ್ಲಿ ಬೆಳವಣಿಗೆ ಹೊಂದುವವರೆಗೂ ದೇವರು ಕಾಯುತ್ತಾನೆ. ಅವನಲ್ಲಿ ಇಂತಹ ಪರಿಪಕ್ವತೆಯನ್ನು ದೇವರು ನೋಡಿದಾಗ ಆಮೇಲೆ ಅವನ ಸೇವೆಯನ್ನು ಆರಂಭಿಸಲು ''ಕೈರೋಸ್'' ಸಮಯವು ಬರುತ್ತದೆ. ಅಲ್ಲಿತನಕ, ಅಗತ್ಯವಿರುವವರೆಗೂ ದೇವರು ಕಾಯುತ್ತಾನೆ. ದೇವರು ಎಂದಿಗೂ ಆತುರಪಡುವುದಿಲ್ಲ.

5

# ಸಮಯದ ಪುನಃಸ್ಥಾಪನೆ

ಯೋವೇಲ 2:25

**ಅಂತು ನಾನು ನಿಮ್ಮ ಮೇಲೆ ಕಳುಹಿಸಿದ ನನ್ನ ದೊಡ್ಡದಂಡು ತಿಂದುಬಿಟ್ಟ ವರುಷಗಳನ್ನು ನಾನು ನಿಮಗೆ ಕಟ್ಟಿಕೊಡುವೆನು**

ಕೀರ್ತನೆಗಳು 103:5

**ಶ್ರೇಷ್ಟವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರಿಗಿ ಬರಮಾಡುತ್ತಾನೆ**

2 ಪೇತ್ರನು 3:8

**ಪ್ರಿಯರೇ ಕರ್ತನ ಎಣಿಕೆಯಲ್ಲಿ ಒಂದು ದಿನವೂ ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮಾತ್ರ ಮರೆಯಬೇಡಿರಿ**

ಮುಕ್ತಾಯದಲ್ಲಿ ಸಮಯವನ್ನು ಪುನಃ ಕಟ್ಟಿಕೊಡುವುದರ ಕುರಿತು ಕೆಲವು ವ್ಯಾಖ್ಯಾನಗಳನ್ನು ಮಾಡೋಣ ಅಪೊಸ್ತರ ಕೃತ್ಯಗಳು 3:19–20ರಲ್ಲಿ ನುಡಿಯಲ್ಪಟ್ಟಿರುವಂತೆ ಪುನಃ ಕಟ್ಟಿಕೊಡುವಂತಹ ಸಮಯದಲ್ಲಿ ನಾವುಗಳು ಜೀವಿಸುತ್ತಿದ್ದೇವೆ. ಎಂಬುದಾಗಿ ಅನೇಕ ಸತ್ಯವೇದದ ವಿದ್ವಾಂಸರು ನಂಬುತ್ತಾರೆ. ಇದು ಮಹತ್ತಾದ ಬಲ ಮತ್ತು ಮಹಿಮೆಯಿಂದ ಪುನಃ ಕಟ್ಟಿಕೊಡುವುದರಿಂದ ಸಭೆಯಲ್ಲಿ ಇದು ನೆರವೇರಿಸಲ್ಪಡುತ್ತದೆ. ಹಾಗಿದ್ದರೂ ವಚನಭಾಗದಲ್ಲಿ ನಾವು ನೋಡುವಂತೆ ದೇವರು ಪುನಃ ಕಟ್ಟಿಕೊಡುವಾಗ, ಆತನು ಹೆಚ್ಚಳವನ್ನು ಸಹ ಮಾಡುತ್ತಾರೆ (ಯೋಬನು 42:10). ದೇವರು ಮರಳಿಕಟ್ಟಿಕೊಡುವುದು ಅತ್ಯಂತ ಹೆಚ್ಚಿನದಾಗಿ ಕಂಡುಬರುತ್ತದೆ. ಮತ್ತು ಮೂಲದಕ್ಕಿಂತ ಉತ್ತಮವಾಗಿರುತ್ತದೆ. ಇದು ಸಹ ಸಮಯದ ಅವಧಿಯಲ್ಲಿ ಸತ್ಯವಾದುದಾಗಿದೆ. ಸಮಯವು ದೇವರನ್ನು ನಿಯಂತ್ರಿಸುವುದಿಲ್ಲ ಆದರೆ ದೇವರು ಸಮಯವನ್ನು ನಿಯಂತ್ರಿಸುತ್ತಾನೆ. ದೇವರ ಗಡಿಯಾರದಲ್ಲಿ ನಾವು ರೂಢಿ ಮಾಡಿಕೊಂಡಿರುವಂತಹದ್ದಕ್ಕಿಂತ ವಿಭಿನ್ನವಾಗಿ ಸಮಯವು ಸಾಗುತ್ತದೆ. ನಮ್ಮಲ್ಲಿ ಕೆಲವರಿಗೆ ಮಿಡತೆಗಳು ನಮ್ಮ ಜೀವಿತಗಳನ್ನು ಹಾಳು ಮಾಡಿರಬಹುದು.

ಈ ಒಂದು ಸನ್ನಿವೇಶದಲ್ಲಿ ಮಿಡತೆಗಳು ಹಾಳುಮಾಡುವ, ನಾಶ ಪಡಿಸುವ ಮತ್ತು ಫಲವಿಲ್ಲದಿರುವದರ ಸಾಂಕೇತಿಕವಾಗಿದೆ. ದೇವರು ವ್ಯರ್ಥವಾಗಿರುವಂತಹ (ಯಾವುದೇ ಕಾರಣವಿರಬಹುದು) ವರುಷಗಳನ್ನು (ಕಾಲ) ಪುನಃ ಕಟ್ಟಿಕೊಡುತ್ತಾನೆ. ನಮ್ಮ ಸ್ವಂತ ಪರಿಶ್ರಮದಿಂದ ಒಂದು ಸಹಸ್ರವರ್ಷಗಳಲ್ಲಿ ನೆರವೇರಿಸಲಾಗದಂತಹದ್ದನ್ನು ಒಂದೇ ವರ್ಷದಲ್ಲಿ ಪವಿತ್ರಾತ್ಮನಿಂದ ನಾವು ನೆರವೇರಿಸುವಂತೆ ಆತನು ಶಕ್ತಗೊಳಿಸುತ್ತಾನೆ. ನಮ್ಮ ಜೀವಿತದಲ್ಲಿ ವ್ಯರ್ಥವಾಗಿರುವಂತಹ ಸಮಯವನ್ನು ದೇವರು ತಿರುಗಿ ಕಟ್ಟಿಕೊಡುವಂತೆ ದೇವರನ್ನು ನೋಡೋಣ.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು(ಮೈಕ್ರೋಸಾಫ್ಟ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

## ಟಿಪ್ಪಣಿಗಳು

ಟಿಪ್ಪಣಿಗಳು

## ಟಿಪ್ಪಣಿಗಳು

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the Nations Association for Theological Accreditation (NATA).

ತಿಳಿಯದ ಸಮಯದಿಂದ ಪ್ರಸ್ತುತಕ್ಕೆ – ಪ್ರಪಂಚದ ಅಸ್ತಿವಾರದಿಂದಲೂ ಅಥವಾ ಬಹುಶಃ ನಿತ್ಯತ್ವದ ಹಿಂದಿನಿಂದಲೂ ಟಿಕ್ ಟಿಕ್ ಶಬ್ದದಿಂದ ದೂರದಾ ಒಂದು ಗಡಿಯಾರವನ್ನು ದೇವರು ಹೊಂದಿದ್ದನು ಎಂಬುದನ್ನು ಪರಿಗಣಿಸಿದ್ದೀರಾ? ನಮ್ಮ ಪ್ರತಿಯೊಬ್ಬರ ಜೀವಿತಗಳಿಗಾಗಿ ದೇವರು ಒಂದು ಗಡಿಯಾರ ಹೊಂದಿದ್ದಾನೆಂಬುದು ನಿಮಗೆ ತಿಳಿದದೆಯಾ? ನಿಮ್ಮ ಕೈಯಲ್ಲಿರುವ ಗಡಿಯಾರಕ್ಕನುಸಾರವಾಗಿ ಮಾತ್ರವಲ್ಲದೇ, ದೇವರ ಗಡಿಯಾರಕ್ಕನುಸಾರವಾಗಿ ನಿಮ್ಮ ಜೀವಿತಗಳು ಕ್ರಮಗೊಂಡಿರಬೇಕೆಂಬುದಾಗಿ ನೀವು ಅಪೇಕ್ಷಿಸಿದ್ದೀರಾ ಅಥವಾ ಎಂದಿಗೂ ಪ್ರಯತ್ನಿಸಿದ್ದೀರಾ? ದೇವರ ಸಮಯಕ್ಕನುಸಾರವಾಗಿ ಕಾರ್ಯಗಳನ್ನು ಮಾಡುವಂತದ್ದು ಮತ್ತು ನಿಮ್ಮ ಜೀವಿತದ ಯಾವುದೇ ನಿರ್ಧಾರಿತ ಸಮಯದಲ್ಲಿ ಆತನು ಅಪೇಕ್ಷಿಸಿದ್ದನ್ನು ನೀವು ಮಾಡುತ್ತಿರುವಂತಹ ವಿಷಯವು ನಿಮಗೆ ಎಷ್ಟು ಪ್ರಾಮುಖ್ಯಕರವಾಗಿದೆ? ಮತ್ತು ನಿಮ್ಮ ಜೀವಿತದಲ್ಲಿ ನಿಗದಿತ ಸಮಯದಲ್ಲಿ ಆತನು ಅಪೇಕ್ಷಿಸುವಂತದ್ದು ನೀವಾಗಿ ಕಂಡುಬರುವಂತದ್ದು ಎಷ್ಟು ಪ್ರಾಮುಖ್ಯಕರವಾಗಿದೆ?

ಇವುಗಳು ಸವಾಲುಳ್ಳ ಪ್ರಶ್ನೆಗಳಾಗಿವೆ ಮತ್ತು ದೇವರ ಗಡಿಯಾರದೊಡನೆ ನಮ್ಮ ಜೀವಿತಗಳು ಆದೇಶಿಸಲ್ಪಟ್ಟಿವೆ. ಎಂಬುದನ್ನು ತಿಳಿದುಕೊಳ್ಳುವುದನ್ನು ಕಲಿಯುವುದು ನಿಜಕ್ಕೂ ಮುಖ್ಯವಾಗಿದೆ. ವ್ಯಕ್ತಿಗತವಾಗಿ ನಮಗೆ ದೇವರ ಸಮಯವನ್ನು ಅರ್ಥಮಾಡಿಕೊಳ್ಳಲೂ ಮತ್ತು ಗ್ರಹಿಸಿಕೊಳ್ಳಲೂ ಈ ಪುಸ್ತಕವು ಸಹಾಯ ಮಾಡುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org